# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪ ನಿರ್ದೇಶಕರ ಕಛೇರಿ, 1ನೇ ಮಹಡಿ, ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ-563101

ದೂ:08152-222753, 223665 Email- ddwcdkolar@gmail.com

---

ಸಂ:ಉನಿಕೋ:ಮಮಅಇ:ಅಕಾಕಸನೇ:2018-19 ದಿನಾಂಕ:29.08.2018

ಕೋಲಾರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಆರು ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ 53 ಅಂಗನವಾಡಿ ಕಾರ್ಯಕರ್ತೆ ಮತ್ತು 205 ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

| | |
|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭದ ದಿನಾಂಕ | 29.08.2018 |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 29.09.2018 ರಂದು ಸಂಜೆ:05.30 |
| ವೆಬ್ ವಿಳಾಸ | **www.anganwadirecruit.kar.nic.in** |

| ತಾಲ್ಲೂಕಿನ ಹೆಸರು | ಪ್ರಕಟಿಸಿದ ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳ ಸಂಖ್ಯೆ | ಪ್ರಕಟಿಸಿದ ಅಂಗನವಾಡಿ ಸಹಾಯಕಿಯರ ಹುದ್ದೆಗಳ ಸಂಖ್ಯೆ |
|---|---|---|
| **ಕೋಲಾರ** | **11** | **65** |
| **ಬಂಗಾರಪೇಟೆ** | **13** | **22** |
| **ಮಾಲೂರು** | **6** | **22** |
| **ಮುಳಬಾಗಿಲು** | **7** | **39** |
| **ಶ್ರೀನಿವಾಸಪುರ** | **11** | **35** |
| **ಬೇತಮಂಗಲ** | **5** | **22** |
| **ಒಟ್ಟು** | **53** | **205** |

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಕೋಲಾರ.

**ಕರ್ನಾಟಕ ಸರ್ಕಾರ**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ**
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ-563101
ದೂ: 08152-229225 Email- cdpoklr@gmail.co

ಸಂ:ಶಿಅಯೋ/ಕೋ/ಅಂ:ಕಾ:ಸ:ಆಯ್ಕೆ:ಪ್ರ/2018-19 ದಿನಾಂಕ:29.08.2018

## ಆನ್‌ಲೈನ್ ಪ್ರಕಟಣೆ

ವಿಷಯ: 2018-19 ನೇ ಸಾಲಿಗೆ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳ ಖಾಲಿ ಇರುವ ಗೌರವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳಿಗೆ ನೇಮಕ ಮಾಡಲು ಪ್ರಕಟಣೆಯನ್ನು ಹೊರಡಿಸಿರುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶದ ಸಂಖ್ಯೆ:ಮಮಇ:303: ಐಸಿಡಿ 2017, ದಿನಾಂಕ:23.09.2017ರ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರನ್ನು ಆಯ್ಕೆ ಮಾಡಲು ಮಾರ್ಗಸೂಚಿಗಳು ಮತ್ತು ಅರ್ಹತೆಯ ಮಾನದಂಡಗಳು.
2. ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ದಿನಾಂಕ:16.03.2018

* * * * *

ಕೋಲಾರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ 6 ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳ ಖಾಲಿ ಇರುವ **53 ಅಂಗನವಾಡಿ ಕೇಂದ್ರಗಳ ಗೌರವ ಕಾರ್ಯಕರ್ತೆ ಹುದ್ದೆಗಳು** ಮತ್ತು **205 ಗೌರವ ಸಹಾಯಕಿಯರ ಹುದ್ದೆಗಳಿಗೆ** ನೇಮಕ ಮಾಡಲು ಉಲ್ಲೇಖಿತ ಪತ್ರ (1)ರ ಅರ್ಹತೆಗಳು ಮತ್ತು ನಿಬಂಧನೆಗಳು ಹಾಗೂ ಮಾನದಂಡಗಳನ್ವಯ ಗೌರವ ಸೇವೆಯ ಆಧಾರದ ಮೇಲೆ ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕಿಯರನ್ನು ಆಯ್ಕೆ ಮಾಡಲು ನಿಗಧಿ ಪಡಿಸಿದ ವಿದ್ಯಾರ್ಹತೆ ಹೊಂದಿರುವ ಸ್ಥಳೀಯ ಮಹಿಳಾ ಅಭ್ಯರ್ಥಿಗಳಿಂದ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸ್ವೀಕರಿಸುವ **ದಿನಾಂಕ:29.08.2018** ರಿಂದ **ದಿನಾಂಕ:29.09.2018** ರವರಿಗೆ **ಆನ್‌ಲೈನ್** ಮೂಲಕ **ಅರ್ಜಿಯನ್ನು** ಸಲ್ಲಿಸಲು **WEBSITE:www.anganwadirecruit.kar.nic.in** ಕೊನೆಯ ದಿನಾಂಕದಂದು **ಸಂಜೆ5-30** ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.**

**ಅಂಗನವಾಡಿ ಕೇಂದ್ರದ ಖಾಲಿ ಇರುವ ಕಾರ್ಯಕರ್ತೆ ಹುದ್ದೆಗಳ ಗ್ರಾಮದ ಹಾಗೂ ಕೇಂದ್ರಗಳ ವಿವರ**

| ಕ್ರಸಂ | ತಾಲ್ಲೂಕು | ಖಾಲಿ ಇರುವ ಅಂಗನವಾಡಿ ಕೇಂದ್ರ/ಗ್ರಾಮದ ಹೆಸರು | ಪಂಚಾಯಿತಿ ಹೆಸರು/ವಾರ್ಡ್ | ಮೀಸಲಾತಿ ವಿವರ |
|---|---|---|---|---|
| 1 | ಕೋಲಾರ | ಅನ್ಸಾರಿ ಮೊಹಲ್ಲಾ | ವಾರ್ಡ್ ನಂ.17 | ಸಾಮಾನ್ಯ |
| 2 | ಕೋಲಾರ | ಹೊಳಲಿ ಹೊಸೂರು | ಶಾಪೂರು | ಸಾಮಾನ್ಯ |
| 3 | ಕೋಲಾರ | ಗದ್ದೇಕಣ್ಣೂರು-1 | ಹೊನ್ನೇನಹಳ್ಳಿ | ಸಾಮಾನ್ಯ |
| 4 | ಕೋಲಾರ | ಅರಾಭಿಕೊತ್ತನೂರು-1 | ಅರಾಭಿಕೊತ್ತನೂರು | ಎಸ್.ಸಿ |
| 5 | ಕೋಲಾರ | ಅಚ್ಚಟ್ನಹಳ್ಳಿ | ಬೆಳ್ಳೂರು | ಸಾಮಾನ್ಯ |
| 6 | ಕೋಲಾರ | ವೀರಾಪುರ | ಸೀತಿ | ಸಾಮಾನ್ಯ |
| 7 | ಕೋಲಾರ | ಮಾರ್ಜೇನಹಳ್ಳಿ | ಸೀತಿ | ಎಸ್.ಸಿ |
| 8 | ಕೋಲಾರ | ಕೆಂಬತ್ತನಹಳ್ಳಿ | ತೊಟ್ಲಿ | ಸಾಮಾನ್ಯ |
| 9 | ಕೋಲಾರ | ವಡ್ಡರಪಾಳ್ಯ | ಮದನಹಳ್ಳಿ | ಎಸ್.ಸಿ |
| 10 | ಕೋಲಾರ | ಪಾಡಿಗಾನಹಳ್ಳಿ | ಅಮ್ಮನಲ್ಲೂರು | ಸಾಮಾನ್ಯ |
| 11 | ಕೋಲಾರ | ಗುರುಗುಂಜಿಗುರ್ಕಿ | ವಕ್ಕಲೇರಿ | ಸಾಮಾನ್ಯ |

| | | | | |
|---|---|---|---|---|
| 12 | ಬಂಗಾರಪೇಟೆ | ಚಿಕ್ಕ ಅಂಕಾಂಡಹಳ್ಳಿ | ಚಿಕ್ಕ ಅಂಕಾಂಡಹಳ್ಳಿ | ಎಸ್.ಸಿ |
| 13 | ಬಂಗಾರಪೇಟೆ | ಬೀರಾಂಡಹಳ್ಳಿ | ಚಿಕ್ಕ ಅಂಕಾಂಡಹಳ್ಳಿ | ಸಾಮಾನ್ಯ |
| 14 | ಬಂಗಾರಪೇಟೆ | ಅಜ್ಜಪ್ಪಲ್ಲಿ | ದೊಡ್ಡವಲಗಮಾದಿ | ಎಸ್.ಸಿ |
| 15 | ಬಂಗಾರಪೇಟೆ | ಕಣ್ಣಿಂಬೆಲೆ | ಐನೋರಹೊಸಹಳ್ಳಿ | ಎಸ್.ಸಿ |
| 16 | ಬಂಗಾರಪೇಟೆ | ಕಾರಮಂಗಲ | ಐನೋರಹೊಸಹಳ್ಳಿ | ಸಾಮಾನ್ಯ |
| 17 | ಬಂಗಾರಪೇಟೆ | ಗುಲ್ಲಹಳ್ಳಿ-1 | ಗುಲ್ಲಹಳ್ಳಿ | ಸಾಮಾನ್ಯ |
| 18 | ಬಂಗಾರಪೇಟೆ | ಪೆದ್ದಪಲ್ಲಿ | ಘಟ್ಟಕಾಮದೇನಹಳ್ಳಿ | ಎಸ್.ಸಿ |
| 19 | ಬಂಗಾರಪೇಟೆ | ರಾಮಲಿಂಗಾಪುರ | ಕೆಸರನಹಳ್ಳಿ | ಎಸ್.ಸಿ |
| 20 | ಬಂಗಾರಪೇಟೆ | ದಿಂಬಾಳ | ಕೇತಗಾನಹಳ್ಳಿ | ಸಾಮಾನ್ಯ |
| 21 | ಬಂಗಾರಪೇಟೆ | ಅಪ್ಪೇನಹಳ್ಳಿ | ಕೇತಗಾನಹಳ್ಳಿ | ಎಸ್.ಸಿ |
| 22 | ಬಂಗಾರಪೇಟೆ | ತಾವರೇಕೆರೆ | ಕೇತಗಾನಹಳ್ಳಿ | ಸಾಮಾನ್ಯ |
| 23 | ಬಂಗಾರಪೇಟೆ | ಕಾವೇರ್ನಹಳ್ಳಿ | ಕಾರಹಳ್ಳಿ | ಎಸ್.ಸಿ |
| 24 | ಬಂಗಾರಪೇಟೆ | ಕಾರಹಳ್ಳಿ ಬಡಾವಣೆ/ಗುಡಿಸಲು | ಕಾರಹಳ್ಳಿ | ಸಾಮಾನ್ಯ |
| 25 | ಮಾಲೂರು | ಕೆಂಪನಹಳ್ಳಿ | ಕೊಂಡಶೆಟ್ಟಹಳ್ಳಿ | ಸಾಮಾನ್ಯ |
| 26 | ಮಾಲೂರು | ಇರಬನಹಳ್ಳಿ | ಮಡಿವಾಳ | ಸಾಮಾನ್ಯ |
| 27 | ಮಾಲೂರು | ಎಟ್ಟಕೋಡಿ | ಚಿಕ್ಕತಿರುಪತಿ | ಸಾಮಾನ್ಯ |
| 28 | ಮಾಲೂರು | ಚಿಕ್ಕಕಡತೂರು | ಹುಂಗೇನಹಳ್ಳಿ | ಪ.ಜಾ |
| 29 | ಮಾಲೂರು | ದೊಡ್ಡಶಿವಾರ-1 | ದೊಡ್ಡಶಿವಾರ | ಸಾಮಾನ್ಯ |
| 30 | ಮಾಲೂರು | ನಿಡಘಟ್ಟ | ಸಂತೇಹಳ್ಳಿ | ಪ.ಜಾ |
| 31 | ಶ್ರೀನಿವಾಸಪುರ | ಅಡ್ಡಗಲ್-1 | ಅಡ್ಡಗಲ್ | ಸಾಮಾನ್ಯ |
| 32 | ಶ್ರೀನಿವಾಸಪುರ | ಗುಟ್ಟಪಲ್ಲಿ | ಸೋಮಯಾಜಲಹಳ್ಳಿ | ಎಸ್.ಸಿ |
| 33 | ಶ್ರೀನಿವಾಸಪುರ | ಪಿ.ಕನಂಪಲ್ಲಿ | ಮುಲಗೂರಕೋಟೆ | ಎಸ್.ಸಿ |
| 34 | ಶ್ರೀನಿವಾಸಪುರ | ಕಿರುವಾರ | ಜೆ ತಿಮ್ಮಸಂದ್ರ | ಸಾಮಾನ್ಯ |
| 35 | ಶ್ರೀನಿವಾಸಪುರ | ಕಠಾರಮುದ್ದಲಹಳ್ಳಿ | ಜೆ ತಿಮ್ಮಸಂದ್ರ | ಸಾಮಾನ್ಯ |
| 36 | ಶ್ರೀನಿವಾಸಪುರ | ಇಲ್ದೋಣಿ | ಮುಲಗೂರಕೋಟೆ | ಸಾಮಾನ್ಯ |
| 37 | ಶ್ರೀನಿವಾಸಪುರ | ಮಂಚಿನೀಳ್ಳಕೋಟೆ | ನೆಲವಂಕಿ | ಎಸ್.ಸಿ |
| 38 | ಶ್ರೀನಿವಾಸಪುರ | ಕೂಳಗುರ್ಕಿ | ಸೋಮಯಾಜಲಹಳ್ಳಿ | ಸಾಮಾನ್ಯ |
| 39 | ಶ್ರೀನಿವಾಸಪುರ | ಲಕ್ಷ್ಮೀಸಾಗರ-1 | ಲಕ್ಷ್ಮೀಸಾಗರ | ಸಾಮಾನ್ಯ |
| 40 | ಶ್ರೀನಿವಾಸಪುರ | ಕೊತ್ತಪಲ್ಲಿ(ಗೌ) | ಬೈರಗಾನಪಲ್ಲಿ | ಸಾಮಾನ್ಯ |
| 41 | ಶ್ರೀನಿವಾಸಪುರ | ಪೆಗಳಪಲ್ಲಿ | ಸೋಮಯಾಜಲಹಳ್ಳಿ | ಸಾಮಾನ್ಯ |
| 42 | ಬೇತಮಂಗಲ | ಗೋಣಮಾಕನಹಳ್ಳಿ-02 | ವಾರ್ಡ್‌ನಂ-35 | ಸಾಮಾನ್ಯ |
| 43 | ಬೇತಮಂಗಲ | ದೊಡ್ಡಕಾರಿ | ಹುಲ್ಕೂರು | ಸಾಮಾನ್ಯ |
| 44 | ಬೇತಮಂಗಲ | ಕವರಗಾನಹಳ್ಳಿ | ಹುಲ್ಕೂರು | ಸಾಮಾನ್ಯ |
| 45 | ಬೇತಮಂಗಲ | ಸುಣ್ಣಕುಪ್ಪ | ಎನ್.ಜಿ.ಹುಲ್ಕೂರು | ಎಸ್.ಸಿ |
| 46 | ಬೇತಮಂಗಲ | ರಾಮಸಾಗರ | ರಾಮಸಾಗರ | ಸಾಮಾನ್ಯ |
| 47 | ಮುಳಬಾಗಿಲು | ಡಿ.ಗೊಲ್ಲಹಳ್ಳಿ | ಎನ್.ಗಡ್ಡೂರು | ಸಾಮಾನ್ಯ |
| 48 | ಮುಳಬಾಗಿಲು | ಸೋಮರಸನಹಳ್ಳಿ | ಮೋತಕಪಲ್ಲಿ | ಸಾಮಾನ್ಯ |
| 49 | ಮುಳಬಾಗಿಲು | ನೇತಾಜಿನಗರ | ನಗರಸಭೆ | ಎಸ್.ಸಿ |
| 50 | ಮುಳಬಾಗಿಲು | ಪಳ್ಳಿಗರಪಾಳ್ಯ-ಎ | ನಗರಸಭೆ | ಸಾಮಾನ್ಯ |
| 51 | ಮುಳಬಾಗಿಲು | ನಾಚಗುಂಡ್ಲಹಳ್ಳಿ | ಎಚ್.ಗೊಲ್ಲಹಳ್ಳಿ | ಸಾಮಾನ್ಯ |
| 52 | ಮುಳಬಾಗಿಲು | ಚೆನ್ನಾಪುರ | ಅಂಗೊಂಡಹಳ್ಳಿ | ಸಾಮಾನ್ಯ |
| 53 | ಮುಳಬಾಗಿಲು | ಶಿನಿಗೇನಹಳ್ಳಿ | ಗುಮ್ಮಕಲ್ಲು | ಸಾಮಾನ್ಯ |

## ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಸಹಾಯಕಿಯರ ಹುದ್ದೆಗಳ ಗ್ರಾಮ ಹಾಗೂ ಕೇಂದ್ರಗಳ ವಿವರ

| ಕ್ರಸಂ | ತಾಲ್ಲೂಕು | ಖಾಲಿ ಇರುವ ಅಂಗನವಾಡಿ ಕೇಂದ್ರ/ಗ್ರಾಮದ ಹೆಸರು | ಪಂಚಾಯಿತಿ ಹೆಸರು/ವಾರ್ಡ್ | ಮೀಸಲಾತಿ ವಿವರ |
|---|---|---|---|---|
| 1 | ಕೋಲಾರ | ರಾಮಸಂದ್ರ | ಬೆಳ್ಳೂರು | ಸಾಮಾನ್ಯ |
| 2 | ಕೋಲಾರ | ಜೊಡಿಕೃಷ್ಣಾಪುರ | ಬೆಳ್ಳೂರು | ಸಾಮಾನ್ಯ |
| 3 | ಕೋಲಾರ | ಬೆಗ್ಲಿಹೊಸಹಳ್ಳಿ-1 | ಬೆಗ್ಲಿಹೊಸಹಳ್ಳಿ | ಸಾಮಾನ್ಯ |
| 4 | ಕೋಲಾರ | ಬೆಗ್ಲಿಬೆಣಜೇನಹಳ್ಳಿ | ಬೆಗ್ಲಿಹೊಸಹಳ್ಳಿ | ಸಾಮಾನ್ಯ |
| 5 | ಕೋಲಾರ | ಗುಟ್ಟಹಳ್ಳಿ | ಬೆಳಮಾರನಹಳ್ಳಿ | ಸಾಮಾನ್ಯ |
| 6 | ಕೋಲಾರ | ಸುಗಟೂರು-3 | ಸುಗಟೂರು | ಸಾಮಾನ್ಯ |
| 7 | ಕೋಲಾರ | ಮಟ್ನಹಳ್ಳಿ | ಸುಗಟೂರು | ಸಾಮಾನ್ಯ |
| 8 | ಕೋಲಾರ | ಹೊಸಮಟ್ನಹಳ್ಳಿ | ಸುಗಟೂರು | ಸಾಮಾನ್ಯ |
| 9 | ಕೋಲಾರ | ನೀಲಕಂಠಪುರ | ಶಾಪೂರು | ಎಸ್.ಸಿ |
| 10 | ಕೋಲಾರ | ಹಳೇಸೋಮರಸನಹಳ್ಳಿ | ಶಾಪೂರು | ಎಸ್.ಸಿ |
| 11 | ಕೋಲಾರ | ಮೇಡಿಹಾಳ | ಶೆಟ್ಟಿಹಳ್ಳಿ | ಸಾಮಾನ್ಯ |
| 12 | ಕೋಲಾರ | ಮಾರ್ಜೇನಹಳ್ಳಿ | ಸೀತಿ | ಎಸ್.ಸಿ |
| 13 | ಕೋಲಾರ | ಚಂಜಿಮಲೆ | ಸೀತಿ | ಎಸ್.ಸಿ |
| 14 | ಕೋಲಾರ | ಸೀತಿ ಹೊಸೂರು | ಸೀತಿ | ಸಾಮಾನ್ಯ |
| 15 | ಕೋಲಾರ | ಮುದುವಾಡಿ ಹೊಸಹಳ್ಳಿ | ಮುದುವಾಡಿ | ಸಾಮಾನ್ಯ |
| 16 | ಕೋಲಾರ | ಮುದುವಾಡಿ-2 | ಮುದುವತ್ತಿ | ಎಸ್.ಸಿ |
| 17 | ಕೋಲಾರ | ಚಿನ್ನಾಪುರ | ಮುದುವತ್ತಿ | ಸಾಮಾನ್ಯ |
| 18 | ಕೋಲಾರ | ಶೆಟ್ಟಿವಾರಹಳ್ಳಿ | ಮದನಹಳ್ಳಿ | ಸಾಮಾನ್ಯ |
| 19 | ಕೋಲಾರ | ಮದನಹಳ್ಳಿ-1 | ಮದನಹಳ್ಳಿ | ಎಸ್.ಸಿ |
| 20 | ಕೋಲಾರ | ಎಂ.ಮಲ್ಲಾಂಡಹಳ್ಳಿ | ಮದ್ದೇರಿ | ಸಾಮಾನ್ಯ |
| 21 | ಕೋಲಾರ | ಬೆಟ್ಟಬೆಣಜೇನಹಳ್ಳಿ | ವಕ್ಕಲೇರಿ | ಸಾಮಾನ್ಯ |
| 22 | ಕೋಲಾರ | ತಿಮ್ಮಸಂದ್ರ | ವಡಗೂರು | ಎಸ್.ಸಿ |
| 23 | ಕೋಲಾರ | ಕೆಂಬೋಡಿ | ವಡಗೂರು | ಸಾಮಾನ್ಯ |
| 24 | ಕೋಲಾರ | ಗಿರ್ನಹಳ್ಳಿ | ವಡಗೂರು | ಎಸ್.ಸಿ |
| 25 | ಕೋಲಾರ | ಟಮಕ-2 | ವಾರ್ಡ್ ನಂ.01 | ಎಸ್.ಸಿ |
| 26 | ಕೋಲಾರ | ಕಠಾರಿಪಾಳ್ಯ-3 | ವಾರ್ಡ್ ನಂ.11 | ಸಾಮಾನ್ಯ |
| 27 | ಕೋಲಾರ | ಕುರುಬರಪೇಟೆ | ವಾರ್ಡ್ ನಂ.05 | ಸಾಮಾನ್ಯ |
| 28 | ಕೋಲಾರ | ಬೋವಿ ಕಾಲೋನಿ | ವಾರ್ಡ್ ನಂ.06 | ಎಸ್.ಸಿ |
| 29 | ಕೋಲಾರ | ಕೋಗಿಲಹಳ್ಳಿ | ವಾರ್ಡ್ ನಂ.06 | ಸಾಮಾನ್ಯ |
| 30 | ಕೋಲಾರ | ಪಿ.ವಿ.ಬಡಾವಣೆ | ವಾರ್ಡ್ ನಂ.14 | ಸಾಮಾನ್ಯ |
| 31 | ಕೋಲಾರ | ಕಠಾರಿಪಾಳ್ಯ-1 | ವಾರ್ಡ್ ನಂ.20 | ಸಾಮಾನ್ಯ |
| 32 | ಕೋಲಾರ | ಕಠಾರಿಪಾಳ್ಯ-2 | ವಾರ್ಡ್ ನಂ.21 | ಸಾಮಾನ್ಯ |
| 33 | ಕೋಲಾರ | ಪೂಲ್ ಷಾ ಮೊಹಲ್ಲಾ-02 | ವಾರ್ಡ್ ನಂ.30 | ಸಾಮಾನ್ಯ |
| 34 | ಕೋಲಾರ | ಬೀಡಿಕಾಲೋನಿ | ವಾರ್ಡ್ ನಂ.35 | ಸಾಮಾನ್ಯ |
| 35 | ಕೋಲಾರ | ವೇಮಗಲ್-2 | ವೇಮಗಲ್ | ಸಾಮಾನ್ಯ |
| 36 | ಕೋಲಾರ | ಕಾಡಹಳ್ಳಿ-1 | ಅಮ್ಮನಲ್ಲೂರು | ಸಾಮಾನ್ಯ |
| 37 | ಕೋಲಾರ | ಬೆಲ್ಲಹಳ್ಳಿ | ಅಮ್ಮನಲ್ಲೂರು | ಎಸ್.ಸಿ |
| 38 | ಕೋಲಾರ | ಮಡೇರಹಳ್ಳಿ | ಅರಾಭಿಕೊತ್ತನೂರು | ಸಾಮಾನ್ಯ |

| | | | | |
|---|---|---|---|---|
| 39 | ಕೋಲಾರ | ಚೆಲುವನಹಳ್ಳಿ | ಅರಾಭಿಕೊತ್ತನೂರು | ಸಾಮಾನ್ಯ |
| 40 | ಕೋಲಾರ | ವೆಂಕಟರಾಪುರ | ಅರಾಭಿಕೊತ್ತನೂರು | ಸಾಮಾನ್ಯ |
| 41 | ಕೋಲಾರ | ತ್ಯಾವನಹಳ್ಳಿ | ಅರಾಭಿಕೊತ್ತನೂರು | ಸಾಮಾನ್ಯ |
| 42 | ಕೋಲಾರ | ಹೊದಲವಾಡಿ | ಅರಹಳ್ಳಿ | ಸಾಮಾನ್ಯ |
| 43 | ಕೋಲಾರ | ಕುಡುವನಹಳ್ಳಿ | ಅಣ್ಣಿಹಳ್ಳಿ | ಸಾಮಾನ್ಯ |
| 44 | ಕೋಲಾರ | ಶ್ಯಾನುಭೋಗನಹಳ್ಳಿ | ಅಣ್ಣಿಹಳ್ಳಿ | ಸಾಮಾನ್ಯ |
| 45 | ಕೋಲಾರ | ಹನುಮಂತಪುರ | ಉರಿಗಿಲಿ | ಎಸ್.ಸಿ |
| 46 | ಕೋಲಾರ | ಐತರಾಸನಹಳ್ಳಿ | ಐತರಾಸನಹಳ್ಳಿ | ಸಾಮಾನ್ಯ |
| 47 | ಕೋಲಾರ | ದಾದಿರೆಡ್ಡಿಹಳ್ಳಿ | ಹೋಳೂರು | ಸಾಮಾನ್ಯ |
| 48 | ಕೋಲಾರ | ಕಮ್ಮಸಂದ್ರ–2 | ಹೋಳೂರು | ಸಾಮಾನ್ಯ |
| 49 | ಕೋಲಾರ | ರಾಮಸಂದ್ರ | ಹುತ್ತೂರು | ಎಸ್.ಸಿ |
| 50 | ಕೋಲಾರ | ಪಟ್ನ | ಹರಟಿ | ಎಸ್.ಸಿ |
| 51 | ಕೋಲಾರ | ಚಾಮರಹಳ್ಳಿ | ಹರಟಿ | ಎಸ್.ಸಿ |
| 52 | ಕೋಲಾರ | ಕ್ಯಾಲನೂರು–2 | ಕ್ಯಾಲನೂರು | ಎಸ್.ಸಿ |
| 53 | ಕೋಲಾರ | ಕ್ಯಾಲನೂರು–4 | ಕ್ಯಾಲನೂರು | ಸಾಮಾನ್ಯ |
| 54 | ಕೋಲಾರ | ಕ್ಯಾಲನೂರು–5 | ಕ್ಯಾಲನೂರು | ಸಾಮಾನ್ಯ |
| 55 | ಕೋಲಾರ | ಮಡಿವಾಳ | ಕುರುಗಲ್ | ಸಾಮಾನ್ಯ |
| 56 | ಕೋಲಾರ | ವಿಶ್ವನಗರ | ಕುರುಗಲ್ | ಸಾಮಾನ್ಯ |
| 57 | ಕೋಲಾರ | ಮಲಿಯಪ್ಪನಹಳ್ಳಿ | ಕುರುಗಲ್ | ಎಸ್.ಸಿ |
| 58 | ಕೋಲಾರ | ಸಂಗೊಂಡಹಳ್ಳಿ | ಕೊಂಡರಾಜನಹಳ್ಳಿ | ಎಸ್.ಸಿ |
| 59 | ಕೋಲಾರ | ಯಡಹಳ್ಳಿ | ತೊರದೇವಂಡಹಳ್ಳಿ | ಸಾಮಾನ್ಯ |
| 60 | ಕೋಲಾರ | ಕೆಂಬತ್ತನಹಳ್ಳಿ | ತೊಟ್ಲಿ | ಸಾಮಾನ್ಯ |
| 61 | ಕೋಲಾರ | ತೊಟ್ಲಿ–1 | ತೊಟ್ಲಿ | ಸಾಮಾನ್ಯ |
| 62 | ಕೋಲಾರ | ಬೈರಾಂಡಹಳ್ಳಿ | ಚನ್ನಸಂದ್ರ | ಸಾಮಾನ್ಯ |
| 63 | ಕೋಲಾರ | ಕಡಗಟ್ಟೂರು | ಚನ್ನಸಂದ್ರ | ಸಾಮಾನ್ಯ |
| 64 | ಕೋಲಾರ | ಚನ್ನಸಂದ್ರ–1 | ಚನ್ನಸಂದ್ರ | ಸಾಮಾನ್ಯ |
| 65 | ಕೋಲಾರ | ದಿಂಬ | ದೊಡ್ಡಹಸಾಳ | ಸಾಮಾನ್ಯ |
| 66 | ಬಂಗಾರಪೇಟೆ | ದೇಶಿಹಳ್ಳಿ–1 | ಬಂಗಾರಪೇಟೆ ಟೌನ್ ವಾರ್ಡ್–21 | ಸಾಮಾನ್ಯ |
| 67 | ಬಂಗಾರಪೇಟೆ | ಕೆರೆಕೋಡಿ | ಬಂಗಾರಪೇಟೆ ಟೌನ್ ವಾರ್ಡ್–23 | ಸಾಮಾನ್ಯ |
| 68 | ಬಂಗಾರಪೇಟೆ | ಕೆಸರನಹಳ್ಳಿ | ಕೆಸರನಹಳ್ಳಿ | ಸಾಮಾನ್ಯ |
| 69 | ಬಂಗಾರಪೇಟೆ | ಮಲ್ಲಂಗುರ್ಕಿ | ದೊಡ್ಡವಲಗಮಾದಿ | ಎಸ್.ಸಿ |
| 70 | ಬಂಗಾರಪೇಟೆ | ದೊಡ್ಡವಲಗಮಾದಿ–1 | ದೊಡ್ಡವಲಗಮಾದಿ | ಸಾಮಾನ್ಯ |
| 71 | ಬಂಗಾರಪೇಟೆ | ಕಾರಹಳ್ಳಿ–1 | ಕಾರಹಳ್ಳಿ | ಸಾಮಾನ್ಯ |
| 72 | ಬಂಗಾರಪೇಟೆ | ಯರ್ರಗೊಳ್ಳ | ಬಲಮಂದೆ | ಸಾಮಾನ್ಯ |
| 73 | ಬಂಗಾರಪೇಟೆ | ಅಕ್ಷಂತ್ರ ಗೊಲ್ಲಹಳ್ಳಿ | ಸೂಲಿಕುಂಟೆ | ಎಸ್.ಸಿ |
| 74 | ಬಂಗಾರಪೇಟೆ | ಸಿದ್ದನಹಳ್ಳಿ | ಸೂಲಿಕುಂಟೆ | ಸಾಮಾನ್ಯ |
| 75 | ಬಂಗಾರಪೇಟೆ | ಎಸ್.ಮಾದಮಂಗಲ | ಸೂಲಿಕುಂಟೆ | ಸಾಮಾನ್ಯ |
| 76 | ಬಂಗಾರಪೇಟೆ | ಮುಗಿಲಬೆಲೆ | ಸೂಲಿಕುಂಟೆ | ಎಸ್.ಸಿ |
| 77 | ಬಂಗಾರಪೇಟೆ | ನಾರಾಯಣಪುರ | ಚಿಕ್ಕ ಅಂಕಾಂಡಹಳ್ಳಿ | ಎಸ್.ಸಿ |
| 78 | ಬಂಗಾರಪೇಟೆ | ಕೃಷ್ಣಾಪುರ–2 | ಘಟ್ಟಕಾಮದೇನಹಳ್ಳಿ | ಎಸ್.ಸಿ |
| 79 | ಬಂಗಾರಪೇಟೆ | ಪೆದ್ದಪಲ್ಲಿ | ಘಟ್ಟಕಾಮದೇನಹಳ್ಳಿ | ಎಸ್.ಸಿ |

| | | | | |
|---|---|---|---|---|
| 80 | ಬಂಗಾರಪೇಟೆ | ಕೋಡಗುರ್ಕಿ | ಯಳೇಸಂದ್ರ | ಸಾಮಾನ್ಯ |
| 81 | ಬಂಗಾರಪೇಟೆ | ಯಳೇಸಂದ್ರ | ಯಳೇಸಂದ್ರ | ಸಾಮಾನ್ಯ |
| 82 | ಬಂಗಾರಪೇಟೆ | ಗರುಡಕೆಂಪನಹಳ್ಳಿ | ಯಳೇಸಂದ್ರ | ಎಸ್.ಸಿ |
| 83 | ಬಂಗಾರಪೇಟೆ | ಬೂದಿಕೋಟೆ-1 | ಬೂದಿಕೋಟೆ | ಸಾಮಾನ್ಯ |
| 84 | ಬಂಗಾರಪೇಟೆ | ಬೋಯಿಸೊಣ್ಣೇನಹಳ್ಳಿ | ಕೇತಗಾನಹಳ್ಳಿ | ಎಸ್.ಸಿ |
| 85 | ಬಂಗಾರಪೇಟೆ | ಅಪ್ಪೇನಹಳ್ಳಿ | ಕೇತಗಾನಹಳ್ಳಿ | ಎಸ್.ಸಿ |
| 86 | ಬಂಗಾರಪೇಟೆ | ಲಕ್ಕೇನಹಳ್ಳಿ | ಕಾಮಸಮುದ್ರ | ಎಸ್.ಸಿ |
| 87 | ಬಂಗಾರಪೇಟೆ | ಹುಲಿಬೆಲೆ-1 | ಹುಲಿಬೆಲೆ | ಸಾಮಾನ್ಯ |
| 88 | ಮಾಲೂರು | ಕಾಡದೇನಹಳ್ಳಿ | ಮಡಿವಾಳ | ಪ.ಪಂ |
| 89 | ಮಾಲೂರು | ಕ್ಷೇತ್ರನಹಳ್ಳಿ | ಬನಹಳ್ಳಿ | ಸಾಮಾನ್ಯ |
| 90 | ಮಾಲೂರು | ಬಿಂಗೀಪುರ | ಅರಳೇರಿ | ಪ.ಪಂ |
| 91 | ಮಾಲೂರು | ಎಟ್ಟಕೋಡಿ | ಚಿಕ್ಕತಿರುಪತಿ | ಸಾಮಾನ್ಯ |
| 92 | ಮಾಲೂರು | ಪುರ | ಎಚ್ ಹೊಸಕೋಟೆ | ಸಾಮಾನ್ಯ |
| 93 | ಮಾಲೂರು | ರಾಜ ಕ್ರಿಷ್ಣಾಪುರ-2 | ಚಿಕ್ಕತಿರುಪತಿ | ಪ.ಜಾ |
| 94 | ಮಾಲೂರು | ಅಲಂಬಾಡಿ-2 | ಚಿಕ್ಕತಿರುಪತಿ | ಸಾಮಾನ್ಯ |
| 95 | ಮಾಲೂರು | ರೈಲ್ವೇ ಸ್ಟೇಷನ್ | ಮಾಲೂರು ಟೌನ್ | ಪ.ಜಾ |
| 96 | ಮಾಲೂರು | ಅರಳೇರಿ-2 | ಅರಳೇರಿ | ಸಾಮಾನ್ಯ |
| 97 | ಮಾಲೂರು | ಸೀತನಾಯಕನಹಳ್ಳಿ-2 | ಎಚ್ ಹೊಸಕೋಟೆ | ಸಾಮಾನ್ಯ |
| 98 | ಮಾಲೂರು | ಎಚ್ ಹೊಸಕೋಟೆ | ಎಚ್ ಹೊಸಕೋಟೆ | ಪ.ಜಾ |
| 99 | ಮಾಲೂರು | ಮಣಿಶೆಟ್ಟಹಳ್ಳಿ | ಕುಡಿಯನೂರು | ಸಾಮಾನ್ಯ |
| 100 | ಮಾಲೂರು | ಬನಹಳ್ಳಿ-2 | ಬನಹಳ್ಳಿ | ಪ.ಜಾ |
| 101 | ಮಾಲೂರು | ಇಂದಿರಾನಗರ | ಮಾಲೂರು ಟೌನ್ | ಪ.ಜಾ |
| 102 | ಮಾಲೂರು | ತಿಮ್ಮನಾಯಕನಹಳ್ಳಿ | ಸಂತೇಹಳ್ಳಿ | ಸಾಮಾನ್ಯ |
| 103 | ಮಾಲೂರು | ವೀರಕಪುತ್ರ | ಟೇಕಲ್ | ಸಾಮಾನ್ಯ |
| 104 | ಮಾಲೂರು | ಕೆಂಪನಹಳ್ಳಿ | ಕೊಂಡಶೆಟ್ಟಹಳ್ಳಿ | ಸಾಮಾನ್ಯ |
| 105 | ಮಾಲೂರು | ಮೈಲಾಂಡಹಳ್ಳಿ | ಸಂತೆಹಳ್ಳಿ | ಸಾಮಾನ್ಯ |
| 106 | ಮಾಲೂರು | ಹಳೇಪಾಳ್ಯ-2 | ಹಳೇಪಾಳ್ಯ | ಸಾಮಾನ್ಯ |
| 107 | ಮಾಲೂರು | ತೊರ್ನಹಳ್ಳಿ | ಹುಳದೇನಹಳ್ಳಿ | ಸಾಮಾನ್ಯ |
| 108 | ಮಾಲೂರು | ಕಂಬೀಪುರ | ಅಬ್ಬೇನಹಳ್ಳಿ | ಪ.ಜಾ |
| 109 | ಮಾಲೂರು | ಸೊಣ್ಣಪ್ಪನಟ್ಟಿ | ಕುಡಿಯನೂರು | ಸಾಮಾನ್ಯ |
| 110 | ಶ್ರೀನಿವಾಸಪುರ | ಬಂಗವಾದಿ | ಮಾಸ್ತೇನಹಳ್ಳಿ | ಸಾಮಾನ್ಯ |
| 111 | ಶ್ರೀನಿವಾಸಪುರ | ಗಾಂಡ್ಲಹಳ್ಳಿ | ಮಾಸ್ತೇನಹಳ್ಳಿ | ಸಾಮಾನ್ಯ |
| 112 | ಶ್ರೀನಿವಾಸಪುರ | ಆಲಂಬಗಿರಿ | ಜೆ ತಿಮ್ಮಸಂದ್ರ | ಸಾಮಾನ್ಯ |
| 113 | ಶ್ರೀನಿವಾಸಪುರ | ಚಿರುವನಹಳ್ಳಿ | ನಂಬಿಹಳ್ಳಿ | ಸಾಮಾನ್ಯ |
| 114 | ಶ್ರೀನಿವಾಸಪುರ | ಕೆ.ಕುರ್ರಪಲ್ಲಿ | ತಾಡಿಗೋಳ್ | ಎಸ್.ಟಿ |
| 115 | ಶ್ರೀನಿವಾಸಪುರ | ತೊರ್ಲವಾರಿಪಲ್ಲಿ | ಅಡ್ಡಗಲ್ | ಸಾಮಾನ್ಯ |
| 116 | ಶ್ರೀನಿವಾಸಪುರ | ತಿಮ್ಮನಪಲ್ಲಿ | ಅಡ್ಡಗಲ್ | ಎಸ್.ಟಿ |
| 117 | ಶ್ರೀನಿವಾಸಪುರ | ಅಡ್ಡಗಲ್-2 | ಅಡ್ಡಗಲ್ | ಸಾಮಾನ್ಯ |
| 118 | ಶ್ರೀನಿವಾಸಪುರ | ಕೊಟ್ರಗೂಳಿ | ಹೊದಲಿ | ಸಾಮಾನ್ಯ |
| 119 | ಶ್ರೀನಿವಾಸಪುರ | ರೋಣೂರು-1 | ರೋಣೂರು | ಸಾಮಾನ್ಯ |
| 120 | ಶ್ರೀನಿವಾಸಪುರ | ಗುಲ್ಲಕುಂಟೆ | ತಾಡಿಗೋಳ್ | ಎಸ್.ಸಿ |
| 121 | ಶ್ರೀನಿವಾಸಪುರ | ಹೈದರಾಲಿ ಮೊಹಲ್ಲಾ-2 | ವಾರ್ಡ್ ನಂ-21 | ಸಾಮಾನ್ಯ |

| | | | | |
|---|---|---|---|---|
| 122 | ಶ್ರೀನಿವಾಸಪುರ | ಜಾಕೀರ್ ಹುಸೇನ್ ಮೊಹಲ್ಲಾ-2 | ವಾರ್ಡ್ ನಂ-16 | ಸಾಮಾನ್ಯ |
| 123 | ಶ್ರೀನಿವಾಸಪುರ | ಗುಡಿಯಪ್ಪನ ಪಾಳ್ಯ | ವಾರ್ಡ್ ನಂ-14 | ಸಾಮಾನ್ಯ |
| 124 | ಶ್ರೀನಿವಾಸಪುರ | ಜಾಕೀರ್‌ಹುಸೇನ್ ಮೊಹಲ್ಲಾ-1 | ವಾರ್ಡ್ ನಂ-22 | ಸಾಮಾನ್ಯ |
| 125 | ಶ್ರೀನಿವಾಸಪುರ | ಆಜಾದ್ ರಸ್ತೆ-1 | ವಾರ್ಡ್ ನಂ-12 | ಸಾಮಾನ್ಯ |
| 126 | ಶ್ರೀನಿವಾಸಪುರ | ಬೋಗಂವಾರಿಪಲ್ಲಿ | ಯರ್ರಂವಾರಿಪಲ್ಲಿ | ಸಾಮಾನ್ಯ |
| 127 | ಶ್ರೀನಿವಾಸಪುರ | ನೀಲಟೂರು(ಹೊ) | ಯಲ್ದೂರು | ಎಸ್.ಸಿ |
| 128 | ಶ್ರೀನಿವಾಸಪುರ | ಶೇಷಾಪುರ | ಲಕ್ಷ್ಮೀಸಾಗರ | ಸಾಮಾನ್ಯ |
| 129 | ಶ್ರೀನಿವಾಸಪುರ | ಯಲ್ದೂರು-3 | ಯಲ್ದೂರು | ಎಸ್.ಟಿ |
| 130 | ಶ್ರೀನಿವಾಸಪುರ | ಶ್ಯಾಗತ್ತೂರು | ಲಕ್ಷ್ಮೀಸಾಗರ | ಸಾಮಾನ್ಯ |
| 131 | ಶ್ರೀನಿವಾಸಪುರ | ಕೊಂಡಸಂದ್ರ | ಲಕ್ಷ್ಮೀಪುರ | ಸಾಮಾನ್ಯ |
| 132 | ಶ್ರೀನಿವಾಸಪುರ | ಉಪ್ಪರಪಲ್ಲಿ{ಲ} | ಲಕ್ಷ್ಮೀಪುರ | ಸಾಮಾನ್ಯ |
| 133 | ಶ್ರೀನಿವಾಸಪುರ | ಪಚ್ಚಾರಮಾಕಲಹಳ್ಳಿ | ಲಕ್ಷ್ಮೀಪುರ | ಸಾಮಾನ್ಯ |
| 134 | ಶ್ರೀನಿವಾಸಪುರ | ತಂತಾರ್ಲಹಳ್ಳಿ | ಪುಲಗೂರಕೋಟೆ | ಎಸ್.ಟಿ |
| 135 | ಶ್ರೀನಿವಾಸಪುರ | ಕೊತ್ತಪಲ್ಲಿ-{ಗೌ} | ಬೈರಗಾನಪಲ್ಲಿ | ಸಾಮಾನ್ಯ |
| 136 | ಶ್ರೀನಿವಾಸಪುರ | ಗೌನಿಪಲ್ಲಿ-1 | ಗೌನಿಪಲ್ಲಿ | ಎಸ್.ಸಿ |
| 137 | ಶ್ರೀನಿವಾಸಪುರ | ಅವಗಾನಪಲ್ಲಿ | ಕೋಡಿಪಲ್ಲಿ | ಎಸ್.ಸಿ |
| 138 | ಶ್ರೀನಿವಾಸಪುರ | ಕೊತ್ತಪೇಟೆ | ಲಕ್ಷ್ಮೀಪುರ | ಎಸ್.ಸಿ |
| 139 | ಶ್ರೀನಿವಾಸಪುರ | ಎ ಕೊತ್ತೂರು | ಕೂರೀಗೆಪಲ್ಲಿ | ಎಸ್.ಸಿ |
| 140 | ಶ್ರೀನಿವಾಸಪುರ | ಬೂರಗಮಾಕಲಹಳ್ಳಿ | ಯರ್ರಂವಾರಿಪಲ್ಲಿ | ಎಸ್.ಟಿ |
| 141 | ಶ್ರೀನಿವಾಸಪುರ | ತಾಡಿಗೋಳ್-1 | ತಾಡಿಗೋಳ್ | ಸಾಮಾನ್ಯ |
| 142 | ಶ್ರೀನಿವಾಸಪುರ | ಪಿ.ಜೇಡಿಮಾಕಲಹಳ್ಳಿ | ಪುಲಗೂರಕೋಟೆ | ಎಸ್.ಸಿ |
| 143 | ಶ್ರೀನಿವಾಸಪುರ | ಹೊಸಹುಡ್ಯ | ಬೈರಗಾನಪಲ್ಲಿ | ಸಾಮಾನ್ಯ |
| 144 | ಶ್ರೀನಿವಾಸಪುರ | ಬೈರಗಾನಪಲ್ಲಿ-1 | ಬೈರಗಾನಪಲ್ಲಿ | ಸಾಮಾನ್ಯ |
| 145 | ಬೇತಮಂಗಲ | ಚಲ್ಲಪ್ಪಲೈನ್ | ವಾರ್ಡ್‌ನಂ-09 | ಎಸ್.ಸಿ |
| 146 | ಬೇತಮಂಗಲ | ಜಿ ಅಂಡ್ ಎಫ್ ಬ್ಲಾಕ್ | ವಾರ್ಡ್‌ನಂ-14 | ಎಸ್.ಸಿ |
| 147 | ಬೇತಮಂಗಲ | ಅಶೋಕನಗರ-02 | ವಾರ್ಡ್‌ನಂ-19 | ಎಸ್.ಸಿ |
| 148 | ಬೇತಮಂಗಲ | ಎಸ್.ಆರ್.ಟಿ-01 | ವಾರ್ಡ್‌ನಂ-21 | ಸಾಮಾನ್ಯ |
| 149 | ಬೇತಮಂಗಲ | ಸ್ವರ್ಣನಗರ ಬಡಾವಣೆ | ವಾರ್ಡ್‌ನಂ-22 | ಸಾಮಾನ್ಯ |
| 150 | ಬೇತಮಂಗಲ | ಮಸ್ಕಂ-01 | ವಾರ್ಡ್‌ನಂ-30 | ಎಸ್.ಸಿ |
| 151 | ಬೇತಮಂಗಲ | ಚಾಮರಾಜಪೇಟೆ-01 | ವಾರ್ಡ್‌ನಂ-32 | ಎಸ್.ಸಿ |
| 152 | ಬೇತಮಂಗಲ | ಪಲ್ಲಗುಡಿಸ್ಯೆ-04 | ವಾರ್ಡ್‌ನಂ-32 | ಸಾಮಾನ್ಯ |
| 153 | ಬೇತಮಂಗಲ | ಪಲ್ಲಗುಡಿಸ್ಯೆ-03 | ವಾರ್ಡ್‌ನಂ-33 | ಎಸ್.ಸಿ |
| 154 | ಬೇತಮಂಗಲ | ಪಲ್ಲಗುಡಿಸ್ಯೆ-02 | ವಾರ್ಡ್‌ನಂ-33 | ಸಾಮಾನ್ಯ |
| 155 | ಬೇತಮಂಗಲ | ಅಡಂಪಲ್ಲಿ | ಪಾರಾಂಡಹಳ್ಳಿ | ಎಸ್.ಸಿ |
| 156 | ಬೇತಮಂಗಲ | ದಿಗರಾಘಡಹಳ್ಳಿ | ಪಾರಾಂಡಹಳ್ಳಿ | ಸಾಮಾನ್ಯ |
| 157 | ಬೇತಮಂಗಲ | ಮುದ್ದೇಗೌಡನಹಳ್ಳಿ | ಪಾರಾಂಡಹಳ್ಳಿ | ಎಸ್.ಸಿ |
| 158 | ಬೇತಮಂಗಲ | ಪಾರಾಂಡಹಳ್ಳಿ-02 | ಪಾರಾಂಡಹಳ್ಳಿ | ಎಸ್.ಸಿ |
| 159 | ಬೇತಮಂಗಲ | ಪಾರಾಂಡಹಳ್ಳಿ-03 | ಪಾರಾಂಡಹಳ್ಳಿ | ಎಸ್.ಸಿ |
| 160 | ಬೇತಮಂಗಲ | ಕಂಗಾನಲ್ಲೂರು | ಹುನ್ಕುಂದ | ಎಸ್.ಸಿ |
| 161 | ಬೇತಮಂಗಲ | ವೀರಸಂದ್ರ | ಕಂಗಾಂಡ್ಲಹಳ್ಳಿ | ಸಾಮಾನ್ಯ |
| 162 | ಬೇತಮಂಗಲ | ನತ್ತ | ಟಿ.ಗೊಲ್ಲಹಳ್ಳಿ | ಸಾಮಾನ್ಯ |
| 163 | ಬೇತಮಂಗಲ | ಗೊಲ್ಲಗುರವೇನಹಳ್ಳಿ | ಕಂಗಾಂಡ್ಲಹಳ್ಳಿ | ಎಸ್.ಸಿ |

| | | | | |
|---|---|---|---|---|
| 164 | ಬೇತಮಂಗಲ | ಬೆಟ್ಕೂರು | ಹುಲ್ಕೂರು | ಎಸ್.ಸಿ |
| 165 | ಬೇತಮಂಗಲ | ಬಲಗಾನಹಳ್ಳಿ | ಮಾರಿಕುಪ್ಪ | ಎಸ್.ಸಿ |
| 166 | ಬೇತಮಂಗಲ | ಜೀಡಮಾಕನಹಳ್ಳಿ | ಎನ್.ಜಿ.ಹುಲ್ಕೂರು | ಸಾಮಾನ್ಯ |
| 167 | ಮುಳಬಾಗಿಲು | ಯಳಚೇಪಲಿ–ಎ | ದೂಲಪಲ್ಲಿ | ಸಾಮಾನ್ಯ |
| 168 | ಮುಳಬಾಗಿಲು | ಕನ್ನತ್ತ | ಎಮ್ಮೇನತ್ತ | ಎಸ್.ಸಿ |
| 169 | ಮುಳಬಾಗಿಲು | ಕೀಲಾಗಾಣಿ | ಸೊನ್ನವಾಡಿ | ಸಾಮಾನ್ಯ |
| 170 | ಮುಳಬಾಗಿಲು | ನಾಗಸಂದ್ರ | ಊರುಕುಂಟೆ ಮಿಟ್ಟೂರು | ಎಸ್.ಸಿ |
| 171 | ಮುಳಬಾಗಿಲು | ಗೋಪಸಂದ್ರ | ಆಂಗೊಂಡಹಳ್ಳಿ | ಎಸ್.ಸಿ |
| 172 | ಮುಳಬಾಗಿಲು | ಬಟ್ಲಬಾವನಹಳ್ಳಿ | ಆವಣಿ | ಎಸ್.ಸಿ |
| 173 | ಮುಳಬಾಗಿಲು | ಬ್ಯಾಟನೂರು | ಮುಷ್ಟೂರು | ಸಾಮಾನ್ಯ |
| 174 | ಮುಳಬಾಗಿಲು | ಪೆದ್ದೂರು–ಎ | ಮುಷ್ಟೂರು | ಸಾಮಾನ್ಯ |
| 175 | ಮುಳಬಾಗಿಲು | ಎಸ್.ಅನಂತಪುರ | ಹೆಬ್ಬಣಿ | ಸಾಮಾನ್ಯ |
| 176 | ಮುಳಬಾಗಿಲು | ಸುಣಪಕುಂಟೆ | ಹೆಬ್ಬಣಿ | ಎಸ್.ಸಿ |
| 177 | ಮುಳಬಾಗಿಲು | ನಂಗಲಿ–ಎ | ನಂಗಲಿ | ಸಾಮಾನ್ಯ |
| 178 | ಮುಳಬಾಗಿಲು | ಗುಮ್ಮಕಲ್ಲು | ಗುಮ್ಮಕಲ್ಲು | ಸಾಮಾನ್ಯ |
| 179 | ಮುಳಬಾಗಿಲು | ಕೆ.ಬಯಪಲ್ಲಿ | ಕೆ.ಬಯಪಲ್ಲಿ | ಸಾಮಾನ್ಯ |
| 180 | ಮುಳಬಾಗಿಲು | ಎನ್.ಗಡ್ಡೂರು | ಗುಮ್ಮಕಲ್ಲು | ಸಾಮಾನ್ಯ |
| 181 | ಮುಳಬಾಗಿಲು | ಮಲ್ಲಕಚ್ಚನಹಳ್ಳಿ | ಬಲ್ಲ | ಎಸ್.ಸಿ |
| 182 | ಮುಳಬಾಗಿಲು | ಬಲ್ಲ | ಬಲ್ಲ | ಸಾಮಾನ್ಯ |
| 183 | ಮುಳಬಾಗಿಲು | ತೊರಡಿ | ಬಲ್ಲ | ಎಸ್.ಸಿ |
| 184 | ಮುಳಬಾಗಿಲು | ಮುತ್ಯಾಲಪೇಟೆ–ಬಿ | ನಗರಸಭೆ | ಸಾಮಾನ್ಯ |
| 185 | ಮುಳಬಾಗಿಲು | ಜಹಂಗೀರ್ ಮೊಹಲ್ಲಾ | ನಗರಸಭೆ | ಸಾಮಾನ್ಯ |
| 186 | ಮುಳಬಾಗಿಲು | ಹೊಸಪಾಳ್ಯ–ಬಿ | ನಗರಸಭೆ | ಸಾಮಾನ್ಯ |
| 187 | ಮುಳಬಾಗಿಲು | ಮೇಲಾಗಾಣಿ | ಎಮ್ಮೇನತ್ತ | ಎಸ್.ಸಿ |
| 188 | ಮುಳಬಾಗಿಲು | ಎನ್.ಯಲುವಹಳ್ಳಿ | ಎನ್.ಗಡ್ಡೂರು | ಸಾಮಾನ್ಯ |
| 189 | ಮುಳಬಾಗಿಲು | ಪೊಂಬರಹಳ್ಳಿ–ಬಿ | ಉತ್ತನೂರು | ಸಾಮಾನ್ಯ |
| 190 | ಮುಳಬಾಗಿಲು | ಮರಳಮೇಡು | ಉತ್ತನೂರು | ಎಸ್.ಸಿ |
| 191 | ಮುಳಬಾಗಿಲು | ಬನಹಳ್ಳಿ | ಉತ್ತನೂರು | ಎಸ್.ಸಿ |
| 192 | ಮುಳಬಾಗಿಲು | ಶಿವನಾರಹಳ್ಳಿ | ಉತ್ತನೂರು | ಸಾಮಾನ್ಯ |
| 193 | ಮುಳಬಾಗಿಲು | ಎನ್.ಯಲುವಹಳ್ಳಿ | ಅಂಬ್ಲಿಕಲ್ಲು | ಸಾಮಾನ್ಯ |
| 194 | ಮುಳಬಾಗಿಲು | ಉಬ್ಬಾಂಡ್ಲಹಳ್ಳಿ | ಆಲಂಗೂರು | ಸಾಮಾನ್ಯ |
| 195 | ಮುಳಬಾಗಿಲು | ತಿಮರಾವುತನಹಳ್ಳಿ–ಎ | ತಿಮರಾವುತನಹಳ್ಳಿ | ಸಾಮಾನ್ಯ |
| 196 | ಮುಳಬಾಗಿಲು | ತಿಮರಾವುತನಹಳ್ಳಿ–ಬಿ | ತಿಮರಾವುತನಹಳ್ಳಿ | ಸಾಮಾನ್ಯ |
| 197 | ಮುಳಬಾಗಿಲು | ತಿರುಮನಹಳ್ಳಿ | ತಾಯಲೂರು | ಸಾಮಾನ್ಯ |
| 198 | ಮುಳಬಾಗಿಲು | ಬಿ.ಕೊರವೇನೂರು | ಮೋತಕಪಲ್ಲಿ | ಸಾಮಾನ್ಯ |
| 199 | ಮುಳಬಾಗಿಲು | ಸುಣ್ಣಂಗೂರು | ಮೋತಕಪಲ್ಲಿ | ಎಸ್.ಸಿ |
| 200 | ಮುಳಬಾಗಿಲು | ಮಲ್ಲನಾಯಕನಹಳ್ಳಿ | ಮಲ್ಲನಾಯಕನಹಳ್ಳಿ | ಸಾಮಾನ್ಯ |
| 201 | ಮುಳಬಾಗಿಲು | ವರದಗಾನಹಳ್ಳಿ | ದೇವರಾಯಸಮುದ್ರ | ಸಾಮಾನ್ಯ |
| 202 | ಮುಳಬಾಗಿಲು | ಎನ್.ಗಡ್ಡೂರು | ಮುದಿಗೆರೆ | ಸಾಮಾನ್ಯ |
| 203 | ಮುಳಬಾಗಿಲು | ಕನ್ನಸಂದ್ರ–ಬಿ | ಕನ್ನಸಂದ್ರ | ಸಾಮಾನ್ಯ |
| 204 | ಮುಳಬಾಗಿಲು | ಬೂಡದೇರು | ಬೈರಕೂರು | ಎಸ್.ಸಿ |
| 205 | ಮುಳಬಾಗಿಲು | ಕೊತ್ತಮಂಗಲ | ಹನುಮನಹಳ್ಳಿ | ಸಾಮಾನ್ಯ |

## ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರುಗಳ ಗೌರವ ಸೇವೆಗೆ ಅರ್ಜಿ ಸಲ್ಲಿಸಲು ಅರ್ಹತೆಗಳು ಮತ್ತು ಮಾನದಂಡಗಳು

1. ಅಂಗನವಾಡಿ ಕಾರ್ಯಕರ್ತೆಯ ಗೌರವ ಸೇವೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿ ಸ್ಥಳೀಯ ಮಹಿಳೆ ಆಗಿದ್ದು ಅದೇ ಗ್ರಾಮ/ವಾರ್ಡ್‌ನಲ್ಲಿ ವಾಸವಾಗಿರುಬೇಕು. **ಹಾಗೂ 18 ರಿಂದ 35 ವರ್ಷಗಳ** ವಯೋಮಿತಿಯಾಳಗಿರಬೇಕು.
2. ಅರ್ಜಿಯ ಜೊತೆಗೆ ತಹಸೀಲ್ದಾರ/ಉಪ ತಹಶೀಲ್ದಾರ್ ರವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ವಾಸಸ್ಥಳ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಒಂದು (1)ವರ್ಷದೊಳಗೆ ಪಡೆದಿರಬೇಕು.
3. ಅಭ್ಯರ್ಥಿಗಳ ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯು ಆಯ್ಕೆ ಮಾಡುತ್ತದೆ.
4. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಗೌರವ ಸೇವೆಗೆ ಸೇರಿದ್ದು, ಮೀಸಲಾತಿ ತತ್ವಗಳು ಅನ್ವಯಿಸುವುದಿಲ್ಲವಾದ್ದರಿಂದ ಯಾವುದೇ ಗ್ರಾಮದ ಜನಸಂಖ್ಯೆಯು ಶೇಕಡ 40 ಕ್ಕಿಂತ ಹೆಚ್ಚಾದ ಪರಿಶಿಷ್ಟಜಾತಿ/ಪಂಗಡದವರು ಒಳಗೊಂಡಿದ್ದಲ್ಲಿ ಆ ವರ್ಗಕ್ಕೆ ಸೇರಿದವರನ್ನು ಮಾತ್ರ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಾಗಿ ಆಯ್ಕೆ ಮಾಡಲಾಗುವುದು ವಿದ್ಯಾರ್ಹತೆ ಮತ್ತು ಇತರ ಅರ್ಹತೆಗಳು ಅನ್ವಯಿಸುತ್ತವೆ
5. 25 ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ **(ಮುಸ್ಲಿಮರು,ಕ್ರಿಶ್ಚಿಯನರು,ಜೈನರು,ಬೌದ್ಧರು,ಪಾರ್ಸಿಗಳು ಮತ್ತು ಸಿಕ್ಕರು)** ಜನಸಂಖ್ಯೆಯಿರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ **ಕನ್ನಡ ಭಾಷೆಯೊಂದಿಗೆ ಆಯಾ ಸಮುದಾಯದ ಭಾಷೆ ಬಲ್ಲವರನ್ನು** ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಆಯ್ಕೆ ಮಾಡಲಾಗುವುದು.
6. *ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಗೆ ಸಂಬಂಧಿಸಿದಂತೆ ಅಂಗನವಾಡಿ ಕೇಂದ್ರ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ ಹಾಗೂ ನಗರ ಪ್ರದೇಶದ ಕಂದಾಯ ವಾರ್ಡ್‌ಗಳನ್ನು ಪರಿಗಣಿಸಲಾಗುವುದು. ಚುನಾವಣಾ ವಾರ್ಡ್‌ಗಳನ್ನು ಪರಿಗಣಿಸಲಾಗುವುದಿಲ್ಲ.*
7. **ಅಂಗನವಾಡಿ** ಕಾರ್ಯಕರ್ತೆಯ ಗೌರವ ಸೇವೆಗೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರುಬೇಕು. ಹೆಚ್ಚಿನ ವಿದ್ಯಾಭ್ಯಾಸ ಹೊಂದಿದವರನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಲಾಗುವುದು. ವಯಸ್ಸು ಸಮಾನವಾಗಿದ್ದಲ್ಲಿ ವಿವಾಹಿತರನ್ನು ಪರಿಗಣಿಸಲಾಗುವುದು.
8. ಕನ್ನಡ ಓದುವುದು, ಬರೆಯುವುದು ಕಡ್ಡಾಯವಾಗಿರುತ್ತದೆ.
9. ಅಂಗನವಾಡಿ ಕಾರ್ಯಕರ್ತೆಯರು ಶಾಲಾಪೂರ್ವ ಶಿಕ್ಷಣವನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವವಹಿಸಬೇಕಾಗಿರುವುದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡವನ್ನು ಒಂದು ಭಾಷೆಯಾಗಿ ವ್ಯಾಸಂಗ ಮಾಡಿದ್ದು. ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳನ್ನು ಆಯ್ಕೆ ಅವಶ್ಯವಿದ್ದಲ್ಲಿ ಕನ್ನಡ ಕನಿಷ್ಠ ಜ್ಞಾನದ ಕುರಿತಂತೆ **ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರ** ಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರೇ ಚರ್ಚಿಸಿ ನಿರ್ಧರಿಸುತ್ತಾರೆ.
10. ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಿಗದಿಪಡಿಸಿದ ಗರಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.
11. **ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ ಮುಕ್ತ ವಿಶ್ವ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜ ಶಾಸ್ತ್ರ./ ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ/ ಅಂಕಪಟ್ಟಿಯು ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದ್ದಲ್ಲಿ, ಅಂತಹ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.**
12. **ಸ್ಥಳಿಯ ಚುನಾಯಿತ ಪ್ರತಿನಿಧಿಗಳು ಅಂಗನವಾಡಿ ಕಾರ್ಯಕರ್ತೆ ಅಥವಾ ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಆಯ್ಕೆಯಾಗುವ ಸಂಭವವಿದ್ದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ರಾಜೀನಾಮೆ ಅಂಗಕೃತ ಪತ್ರ ಪಡೆಯಬೇಕಾಗಿರುವುದು ಕಡ್ಡಾಯ. ಅಂದರೆ ಯವುದಾದರೂ ಒಂದು ಸ್ಥಾನದಲ್ಲಿ ಮಾತ್ರ ಕೆಲಸ ನಿರ್ವಹಿಸಲು ಅವಕಾಶವಿದೆ.**
13. **<u>ಆಸಿಡ್‌ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹುದ್ಧೆಗೆ ಅರ್ಜಿ ಸಲ್ಲಿಸಿದ್ದಲ್ಲಿ. ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು.</u>**

**I.)** ವಿಧವೆಯರ ಆಯ್ಕೆ:-

14. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ನೇರವಾಗಿ ವಿಧವೆಯರನ್ನೆ ಆಯ್ಕೆ ಮಾಡಲಾಗುವುದು.
15. **ವಿಧವೆ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣ ಕಡ್ಡಾಯವಾಗಿರುತ್ತದೆ.**
16. ಸ್ಥಳಿಯರು ಮತ್ತು ವಯೋಮಿತಿಯೊಳಗಿರಬೇಕಾಗಿರುವುದು ಸಹ ಕಡ್ಡಾಯವಾಗಿರುತ್ತದೆ.
17. ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.
18. ಒಂದು ವೇಳೆ ಒಂದೇ ಕೇಂದ್ರಕ್ಕೆ ವಿಧವೆ ಹಾಗೂ ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ವಿಧವೆಯರಿಗೆ ಪ್ರಥಮ ಆದ್ಯತೆ ನೀಡಲಾಗುವುದು.
19. **<u>ವಿಧವೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡಲಾಗುವುದು. (ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ) ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.</u>**

**II.ಅಂಗವಿಕಲರ ಆಯ್ಕೆ:-**

20. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ ನೇರವಾಗಿ ಅಂಗವಿಕಲರನ್ನೇ ಆಯ್ಕೆ ಮಾಡಲಾಗುವುದು. **(ವಿಧವೆಯರು ಇಲ್ಲದಿದ್ದಾಗ)**
21. **ಇತರೆ ದೈಹಿಕ ಅಂಗವೈಕಲ್ಯವುಳ್ಳವರು ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರಬೇಕು. ಶೇ 60ಕ್ಕಿಂತ ಕಡಿಮೆ ಅಂಗವೈಕಲ್ಯವುಳ್ಳವರು ಅರ್ಜಿ ಸಲ್ಲಿಸಬಹುದಾಗಿದೆ.** ಅಂಗಿಕೃತ ಪ್ರಾಧಿಕಾರದಿಂದ (ಜಿಲ್ಲಾ ವೈದ್ಯಕೀಯ ಮಂಡಳಿ) ಸದರಿ ಹುದ್ದೆ ನಿರ್ವಹಿಸಲು ಸಮರ್ಥರಾಗಿದ್ದಾರೆಂಬುದರ ಬಗ್ಗೆ ಅರ್ಜಿಯೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
22. ಸ್ಥಳಿಯರು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿವುದು ಕಡ್ಡಾಯವಾಗಿರುತ್ತದೆ.
23. ಸ್ಥಳಿಯರು ಮತ್ತು ವಯೋಮಿತಿಯೊಳಗಿರಬೇಕಾಗಿವುದು ಸಹ ಕಡ್ಡಾಯವಾಗಿರುತ್ತದೆ,
24. ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.
25. ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ ಶಾಲಾ ಪೂರ್ವ ಶಿಕ್ಷಣವನ್ನು 3-6 ವರ್ಷ ಮಕ್ಕಳಿಗೆ ನೀಡಬೇಕಾಗಿರುತ್ತದೆ ಮನೆ ಬೇಟಿ ಹಾಗೂ ವಿವಿಧ ಮಾಹಿತಿಗಳನ್ನೊಳಗೊಂಡ ದಾಖಲೆಗಳನ್ನು ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಈ ಕೆಳಗಿನವರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ.

    **ಕಿವುಡರು, * ಮೂಕರು, * ಕುರುಡರು ಮತ್ತು * ಮಾನಸಿಕ ಅಸ್ವಸ್ಥರು ಅರ್ಹರಾಗಿರುವುದಿಲ್ಲ.**

**111. ಅಂಗನವಾಡಿ ಸಹಾಯಕಿಯರು ಆಯ್ಕೆ :-**

26. ಅಂಗನವಾಡಿ ಸಹಾಯಕಿಯ ಹುದ್ದೆಗೆ ಅರ್ಜಿ ಸಲ್ಲಿಸುವರು ಸ್ಥಳೀಯ ಮಹಿಳೆಯಾಗಿರಬೇಕು. ಅಂಗನವಾಡಿ ಕೇಂದ್ರ ಇರುವ ಗ್ರಾಮ/ವಾರ್ಡನಲ್ಲೇ ವಾಸಿಸುತ್ತಿರಬೇಕು. 18 ರಿಂದ 35 ವರ್ಷ ವಯೋಮಿತಿಯೊಳಗಿರುತಕ್ಕದ್ದು. **ಅಭ್ಯರ್ಥಿಗಳು ಸ್ಥಳೀಯರಾಗಿರಬೇಕಾಗಿದ್ದು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಮೂಲ ವಾಸಸ್ಥಳ ದೃಢೀಕರಣಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ 1 ವರ್ಷ ಒಳಗೆ ಪಡೆದಿರಬೇಕು, ವಯಸ್ಸಿನ ದೃಢೀಕರಣಕ್ಕೆ ಕಡ್ಡಾಯವಾಗಿ ಶಾಲಾ ವರ್ಗಾವಣಾ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.**
27. ಕನಿಷ್ಠ 4ನೇ ತರಗತಿ ತೇರ್ಗಡೆ, ಗರಿಷ್ಠ 9ನೇ ತರಗತಿ ತೇರ್ಗಡೆ. ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಲಾಗುವುದು. 9 ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಒಂದೇ ವಿದ್ಯಾರ್ಹತೆ ಹೊಂದಿರುವ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಿದ್ದಲ್ಲಿ ಹೆಚ್ಚು ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು. ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
28. ಅಂಗನವಾಡಿ ಸಹಾಯಕಿಯ ಹುದ್ದೆಗೆ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನವಿರುವುದು ಕಡ್ಡಾಯವಾಗಿರುತ್ತದೆ.
29. ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ವಿದ್ಯಾರ್ಹತೆಗೆ ನಿಗದಿಪಡಿಸಿದ ಗರಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸ ವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.

**IV.ವಿಧವೆಯರ ಆಯ್ಕೆ:-**

30. ಅಂಗನವಾಡಿ ಸಹಾಯಕಿಯ ಹುದ್ದೆಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಇತರ ಇಲ್ಲ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ನೇರವಾಗಿ ವಿಧವೆಯರನ್ನೆ ಆಯ್ಕೆ ಮಾಡಲಾಗುವುದು.
31. **ವಿಧವೆ ಅಭ್ಯರ್ಥಿಯು ನಿಗಧಿತ ವಿದ್ಯಾರ್ಹತೆ, ಸ್ಥಳೀಯರಾಗಿರುವುದು** ಮತ್ತು ವಯೋಮಿತಿಯೊಳಗಿರಬೇಕಾದ್ದು ಕಡ್ಡಾಯ.
32. 
33. ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆಮಾಡಲಾಗುವುದು..
34. ವಿಧವೆಯರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರ ಸಲ್ಲಿಸಿರುತ್ತಾರೋ ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸಲಾಗುವುದು.
35. ಪರಿಶಿಷ್ಠ ಜಾತಿ/ಪಂಗಡ ವರ್ಗದವರಿಗೆ ಸಹಾಯಕಿಯ ಹುದ್ದೆಯನ್ನು ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದ ವಿಧವೆಯರು ಅರ್ಜಿ ಸಲ್ಲಿಸಿದಲ್ಲಿ ವಿಧವೆಯರನ್ನೇ ಆಯ್ಕೆ ಮಾಡಲಾಗುವುದು.
36. ಬೇರೆ ವರ್ಗದ ವಿಧವೆಯರು ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಪರಿಗಣಿಸಲಾಗುವುದಿಲ್ಲ.
37. **ವಿಧವೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡಲಾಗುವುದು. (ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ) ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.**

**V.ಅಂಗವಿಕಲರ ಆಯ್ಕೆ:-**

ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ/ಸಿದ್ದಪಡಿಸಿ ಉಣಬಡಿಸಬೇಕಾಗುತ್ತದೆ ಮತ್ತು ಕೇಂದ್ರವನ್ನು ಶುಚಿಗೊಳಿಸಬೇಕಾಗುತ್ತದೆ. ಹಾಗೂ ಮಕ್ಕಳ ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವ ಕೆಲಸನಿರ್ವಹಿಸಬೇಕು. ಆದ ಕಾರಣ ಸಹಾಯಕಿಯ ಹುದ್ದಗೆ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸುವ ಅವಕಾಶವಿಲ್ಲ.

**VI. ಬೋನಸ್ ಅಂಗಳು:- (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)**

1. **ಮಾಜಿ ದೇವದಾಸಿಯ ಮಗಳು .2 ಯೋಜನಾ ನಿರಾಶ್ರಿತರು .3. ವಿಚ್ಛೇದಿತ ಮಹಿಳೆಯರು, 4. ಪರಿತ್ಯಕ್ತೆಯರು**

    ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡಲಾಗುವುದು, ಅದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5 (5%) ಅಂಕ ನೀಡಲಾಗುವುದಿಲ್ಲ. ಉದಾ: ಒಬ್ಬ ಅಭ್ಯರ್ಥಿಯ ನಿರಾಶ್ರಿತರು, ಪರಿತ್ಯಕ್ತೆ ಮಾಜಿ ದೇವದಾಸಿ, ವಿಚ್ಛೇದಿತರು ಆಗಿದ್ದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ್ ಅಂಕಗಳನ್ನು

ನೀಡಲಾಗುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು +5, ಯೋಜನಾ ನಿರಾಶ್ರತರು +5, ವಿಚ್ಚೇದಿತ ಮಹಿಳೆಯರು +5, ಪರಿತ್ಯಕ್ತೆಯರು +5, ಒಟ್ಟು ಬೋನಸ್ ಅಂಕಗಳನ್ನು ನೀಡುವುದು **ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ.**

**VII. ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು**

1. ಅರ್ಜಿ ನಿಗದಿತ ನಮೂನೆಯಲ್ಲಿ (ಆನ್-ಲೈನ್)
2. ಜನನ ಪ್ರಮಾಣ ಪತ್ರ ಅಥವಾ ವಯಸ್ಸಿನ ಯಾವುದೇ ದೃಢೀಕರಣ ಪತ್ರ / ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ.
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.
4. ತಹಶೀಲ್ದಾರರಿಂದ/ಉಪ ತಹಶೀಲ್ದಾರರಿಂದ ಪಡೆದ ಒಂದು (1) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ
5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ
6. ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ)
7. ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
8. ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ)
9. ವಿಚ್ಛೇಧನ ಪ್ರಮಾಣ ಪತ್ರ (ಗಂಡ ಬಿಟ್ಟವಳಾಗಿದ್ದರೆ ಮಾತ್ರ)/ ನ್ಯಾಯಲಯದಿಂದ ಪಡೆದಿರಬೇಕು.)
10. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳ ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11. ಪರಿತ್ಯಕ್ತೆ ಬಗ್ಗೆ ಗ್ರಾಮಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರ (ಪರಿತ್ಯಕ್ತೆಯಾಗಿದ್ದಲ್ಲಿ ಮಾತ್ರ)
12. ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿ ಎಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13. ಯೋಜನಾ ನಿರಾಶ್ರಿತರೆಂಬ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

**VII ಆಯ್ಕೆ ವಿಧಾನ:-**

**ಆನ್-ಲೈನ್ ಅರ್ಜಿಯೊಂದಿಗೆ** ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡುಬಂದಲ್ಲಿ ನೇಮಕಾತಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.
2. ಸದರಿ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಾಗಿರುವುದಿಲ್ಲ.

ಈ ಪ್ರಕಟಣೆಯನ್ನು ರದ್ದುಪಡಿಸುವ ಅಥವಾ ಮಾರ್ಪಡಿಸುವ ಅಧಿಕಾರಿವನ್ನು ಆಯ್ಕೆ ಸಮಿತಿ ಅಧ್ಯಕ್ಷರು ಕಾಯ್ದಿರಿಸಿಕೊಂಡಿರುತ್ತಾರೆ.

Sowmya.M

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ,
ಕೋಲಾರ.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.**

1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ
2. ಮಾನ್ಯ ಜಿಲ್ಲಾಧಿಕಾರಿಗಳು ಕೋಲಾರ, ರವರಿಗೆ
3. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೋಲಾರ, ರವರಿಗೆ

**ಪ್ರತಿಯನ್ನು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ತಮ್ಮ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ**

**ಗ್ರಾಮ ಪಂಚಾಯಿತಿ ಮತ್ತು ಶಾಲೆಗಳಿಗೆ.**

Sowmya.M

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ,
ಕೋಲಾರ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗನವಾಡಿ ಕಾರ್ಯಕರ್ತೆಯರ/ಸಹಾಯಕಿಯರ ಆಯ್ಕೆ ಮಾಡಲು ಹೊರಡಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ ಮಮಇ: 237 ಐಸಿಡಿ 2012 ದಿನಾಂಕ 15.06.2012
2) ಸರ್ಕಾರದ ಆದೇಶ ಸಂಖ್ಯೆ ಮಮಇ: 89 ಐಸಿಡಿ, ದಿನಾಂಕ 19.04.2014
3) ಸರ್ಕಾರದ ತಿದ್ದುಪಡಿ ಆದೇಶ ಮಮಇ 218 ಐಸಿಡಿ 2015 ದಿನಾಂಕ 02.07.2016
4) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಮಮಇ 158 ಐಸಿಡಿ 2017 ದಿ: 19.04.2017
5) ಸರ್ಕಾರದ ತಿದ್ದುಪಡಿ ಆದೇಶ ಮಮಇ 235 ಐಸಿಡಿ 2017 ದಿನಾಂಕ 02.08.2017
6) ನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಏಕ ಕಡತ ಸಂಖ್ಯೆ: ಡಿಡಬ್ಲ್ಯುಸಿ/ಐಸಿಡಿ/ಎಎನ್‌ಜಿ-1/79/2017-18, ದಿನಾಂಕ 06.09.2017.

ಪ್ರಸ್ತಾವನೆ:

ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರ / ಸಹಾಯಕಿಯರನ್ನು ಆಯ್ಕೆ ಮಾಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 15.06.2012ರ ಆದೇಶದಲ್ಲಿ ರಚಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು ಹಾಗು ಸದರಿ ಮಾರ್ಗ ಸೂಚಿಗಳನ್ನು ಉಲ್ಲೇಖ (2) ರಲ್ಲಿ ಓದಲಾದ ದಿನಾಂಕ 19.04.2014 ರ ಆದೇಶದಲ್ಲಿ ಪರಿಷ್ಕರಿಸಲಾಗಿತ್ತು.

ಅಂಗನವಾಡಿ ಕಾರ್ಯಕರ್ತೆಯರ / ಸಹಾಯಕಿಯರನ್ನು ಆಯ್ಕೆ ಮಾಡಲು ಹೊರಡಿಸಲಾದ ಆದೇಶಗಳಿಗೆ ಕ್ರಮ ಸಂಖ್ಯೆ (3) ರಿಂದ (6) ರಲ್ಲಿ ಓದಲಾದ ಆದೇಶಗಳಲ್ಲಿ ಕೆಲವು ಸೇರ್ಪಡೆ ಮತ್ತು ತಿದ್ದುಪಡಿಗಳನ್ನು ಮಾಡಿರುವುದರಿಂದ ಅವುಗಳನ್ನು ಅಳವಡಿಸಿಕೊಂಡು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿಯನ್ನು ಆನ್‌ಲೈನ್ ಮುಖಾಂತರ ಮಾಡಲು ಅನುಕೂಲವಾಗುವಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಇವರು ಮೇಲೆ ಓದಲಾದ ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ: 23.09.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರ / ಸಹಾಯಕಿಯರನ್ನು ಆಯ್ಕೆಯನ್ನು ಆನ್‌ಲೈನ್ ಮುಖಾಂತರ ಮಾಡಲು

Scanned by CamScanner

ಹಾಗೂ ಮೇಲೆ ನಮೂದಿಸಿರುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ದಿನಾಂಕ 19.04.2014ರ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪರಿಷ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-I
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ 500 ಪ್ರತಿಗಳನ್ನು ಒದಗಿಸುವಂತೆ ಕೋರಿದೆ

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಎಲ್ಲಾ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು
5. ಎಲ್ಲಾ ಆಯ್ಕೆ ಸಮಿತಿಯ ಸದಸ್ಯರು
6. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 3 ರಿಂದ 6 ನಿರ್ದೇಶನಾಲಯದ ಮುಖಾಂತರ)

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ.

Scanned by CamScanner

ಸರ್ಕಾರಿ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ:23.09.2017ಕ್ಕೆ ಅನುಬಂಧ

## ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರನ್ನು ಆಯ್ಕೆ ಮಾಡಲು ಮಾರ್ಗಸೂಚಿಗಳು ಮತ್ತು ಅರ್ಹತೆಯ ಮಾನದಂಡಗಳು.

### 1 ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಅರ್ಹತೆ ಮಾನದಂಡಗಳು:-

1) ವಯೋಮಿತಿ:

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 18-35 ವರ್ಷ ವಯೋಮಿತಿಯೊಳಗಿರಬೇಕು.

2) ಸ್ಥಳೀಯತೆ:

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸ್ಥಳೀಯರಾಗಿರಬೇಕು.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಒಂದು(1) ವರ್ಷದೊಳಗೆ ಸಂಬಂಧಪಟ್ಟ ತಹಶೀಲ್ದಾರರಿಂದ / ಉಪ ತಹಶೀಲ್ದಾರರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

3) ವಿದ್ಯಾರ್ಹತೆ:

i) ಅಂಗನವಾಡಿ ಕಾರ್ಯಕರ್ತೆ: ಎಸ್.ಎಸ್.ಎಲ್.ಸಿ. ತೇರ್ಗಡೆ. ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

ಅ) ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ / ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ / ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ / ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ / ಅಂಕಪಟ್ಟಿಯು ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದಲ್ಲಿ, ಅಂತಹ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಆ) ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದರೂ, ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಇ) ಅಂಗನವಾಡಿ ಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರನ್ನು ಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರು ನಿರ್ಧರಿಸುವುದು.

ii) ಅಂಗನವಾಡಿ ಸಹಾಯಕಿ:

ಅ) ಕನಿಷ್ಠ 4ನೇ ತರಗತಿ ತೇರ್ಗಡೆ, ಗರಿಷ್ಠ 9ನೇ ತರಗತಿ ತೇರ್ಗಡೆ. ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಬೇಕು. 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

ಆ) ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಿದ್ದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಬೇಕು.

Scanned by CamScanner

II ಅಂಗನವಾಡಿ ಕೇಂದ್ರಗಳ ವ್ಯಾಪ್ತಿ ಗುರ್ತಿಸುವ ಬಗ್ಗೆ:-

1) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಗೌರವಸೇವೆಗೆ ಸೇರಿದೆ. ಅಂಗನವಾಡಿ ಕೇಂದ್ರ ಪ್ರಾರಂಭಿಸುವ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ / ನಗರ ಪ್ರದೇಶದ ಕಂದಾಯ ವಾರ್ಡ್‌ನ ಒಟ್ಟು ಜನಸಂಖ್ಯೆಯು ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಹಾಗೂ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆ ಕಾರ್ಯಕರ್ತೆ / ಸಹಾಯಕಿಯ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಬೇಕು. ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಯಾವ ವರ್ಗದವರಿಗೆ ಹುದ್ದೆಯನ್ನು ನಿಗದಿಪಡಿಸಲಾಗಿದೆಯೆಂದು ಸೂಚಿಸಬೇಕು. ನಿಗದಿಪಡಿಸಿದ ವರ್ಗದವರನ್ನೆ ಆಯ್ಕೆ ಮಾಡುವುದು.

2) ಒಂದು ಗ್ರಾಮದಲ್ಲಿ ಈಗಾಗಲೇ ಅಂಗನವಾಡಿ ಕೇಂದ್ರವಿದ್ದು ಪುನ: ಬೇಡಿಕೆಗೆ ಅನುಸಾರವಾಗಿ ಹೊಸ ಕೇಂದ್ರವನ್ನು ಪ್ರಾರಂಭಿಸುತ್ತಿದ್ದಲ್ಲಿ, ಹೊಸ ಕೇಂದ್ರ ಪ್ರಾರಂಭಿಸುವ ಪ್ರದೇಶದ (ವ್ಯಾಪ್ತಿಯ) ಜನಸಂಖ್ಯೆಯಲ್ಲಿ ಶೇಕಡ 40ಕ್ಕಿಂತ ಹೆಚ್ಚು ಜನಸಂಖ್ಯೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದವರಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಸದರಿ ವರ್ಗದವರಿಗೆ ಕಾರ್ಯಕರ್ತೆ / ಸಹಾಯಕಿ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿ ಆ ವರ್ಗದವರನ್ನೇ ಆಯ್ಕೆ ಮಾಡುವುದು.

3) ಶೇಕಡ 25ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಮರು, ಕ್ರಿಶ್ಚಿಯನರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಸಿಕ್ಕರು) ಜನಸಂಖ್ಯೆಯಿರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪ ಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ / ಸಹಾಯಕಿಯ ಹುದ್ದೆಗೆ ಆಯ್ಕೆ ಮಾಡುವುದು.

4) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಕಾರ್ಯಕರ್ತೆ / ಸಹಾಯಕಿ ಹುದ್ದೆ ನಿಗದಿಪಡಿಸಿದ ಅಂಗನವಾಡಿ ಕೇಂದ್ರಗಳಲ್ಲಿ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದಿದ್ದಲ್ಲಿ ಮರುಪ್ರಕಟಣೆಯನ್ನು 7 ದಿವಸಗಳೊಳಗೆ ಹೊರಡಿಸಿ ಪುನ:ಅರ್ಜಿಗಳನ್ನು ಆಹ್ವಾನಿಸಬೇಕು.ಆಗಲೂ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದೇ ಹೋದಲ್ಲಿ ಪುನ: 10 ದಿನಗಳೊಳಗೆ ಪ್ರಕಟಣೆ ಹೊರಡಿಸಿ ಸಾಮಾನ್ಯ ವರ್ಗದವರಿಂದ ಅರ್ಜಿ ಆಹ್ವಾನಿಸಿ ಆಯ್ಕೆ ಮಾಡುವುದು.

5) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸಂಬಂಧಿಸಿದ ಅಂಗನವಾಡಿ ಕೇಂದ್ರದ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ ಹಾಗೂ ನಗರ ಪ್ರದೇಶದ ಕಂದಾಯ ವಾರ್ಡ್‌ಗಳನ್ನು ಪರಿಗಣಿಸಬೇಕು. ಚುನಾವಣಾ ವಾರ್ಡ್‌ಗಳನ್ನು ಪರಿಗಣಿಸುವಂತಿಲ್ಲ.

6) ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಆ ಕೇಂದ್ರ ವ್ಯಾಪ್ತಿಗೆ ಸಂಬಂಧಪಟ್ಟ ಗ್ರಾಮ / ವಾರ್ಡ್‌ರವರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಬೇಕು. ಒಂದು ವೇಳೆ ಆ ಗ್ರಾಮ / ವಾರ್ಡ್‌ರವರಿಂದ ಅರ್ಜಿಗಳು ಸ್ವೀಕೃತವಾಗದೇ ಹೋದಲ್ಲಿ 7 ದಿವಸಗಳೊಳಗೆ ಮರು ಪ್ರಕಟಣೆ ಹೊರಡಿಸಬೇಕು. ಎರಡನೆಯ ಬಾರಿಯೂ ಸ್ಥಳೀಯರಿಂದ ಅರ್ಜಿ ಸ್ವೀಕೃತವಾಗದಿದ್ದಲ್ಲಿ ಪುನ: 10 ದಿವಸಗಳೊಳಗೆ ಪ್ರಕಟಣೆ ಹೊರಡಿಸಿ ಅತ್ಯಂತ ಸಮೀಪದ ಗ್ರಾಮ / ವಾರ್ಡ್‌ಗಳಿಂದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

7) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಗಾಗಿ ಎರಡನೇ ಬಾರಿಗೆ ಯಾವುದೇ ಮರು ಪ್ರಕಟಣೆ ಹೊರಡಿಸುವ ಮುನ್ನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸ್ವತ: ಗ್ರಾಮ / ವಾರ್ಡ್‌ಗೆ ಭೇಟಿ ನೀಡಿ ಆ ವರ್ಗದ / ಗ್ರಾಮದ / ವಾರ್ಡ್‌ನ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲವೆಂಬ ಬಗ್ಗೆ ಸ್ಥಳ ಪರಿಶೀಲನಾವರದಿ ಪಡೆದುಕೊಂಡಿರಬೇಕು.

8) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗಾಗಿ ಪ್ರಕಟಣೆಯನ್ನು ಸ್ಪಷ್ಟ / ನಿಖರವಾಗಿ ಹೊರಡಿಸತಕ್ಕದ್ದು. ಹುದ್ದೆ ಖಾಲಿಯಿರುವ ಸ್ಥಳ, ಆ ಹುದ್ದೆ ಜನಸಂಖ್ಯೆ ಆಧಾರದಲ್ಲಿ ಯಾವ ವರ್ಗಕ್ಕೆ ನಿಗದಿಪಡಿಸಲಾಗಿದೆ ಎಂಬ ಬಗ್ಗೆ ತಿಳಿಸಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸತಕ್ಕದ್ದು. ಪ್ರಕಟಣೆಯನ್ನು ಗ್ರಾಮದ ಕೃಷಿ ಸಂಪರ್ಕ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆ, ಗ್ರಾಮ ಲೆಕ್ಕಿಗರ

Scanned by CamScanner

ಕಛೇರಿ, ಅಂಗನವಾಡಿ ಕಟ್ಟಡ, ಗ್ರಾಮ ಪಂಚಾಯತ್ ಕಛೇರಿ ಕಟ್ಟಡ ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಪ್ರಕಟಣೆ ಹೊರಡಿಸಿದ ದಿನಾಂಕದಿಂದ 25 ದಿನಗಳೊಳಗೆ ಅರ್ಜಿ ಸಲ್ಲಿಸುವ ಕಾಲಾವಧಿಯನ್ನು ನಿಗದಿಪಡಿಸಿರತಕ್ಕದ್ದು ಹಾಗೂ ಪ್ರಕಟಣೆಯ ಪ್ರತಿಯನ್ನು ಆಯ್ಕೆ ಸಮಿತಿಯ ಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು.

9) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿವಾಹಿತರನ್ನು ಪರಿಗಣಿಸಬೇಕು.

10) ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಾದ / ಹೊಸ ಕೇಂದ್ರಕ್ಕೆ ಅರ್ಹ ಸಹಾಯಕಿಯರಿಂದ ಕಾರ್ಯಕರ್ತೆ ಹುದ್ದೆ ಕೋರಿ ಅರ್ಜಿ ಸ್ವೀಕೃತವಾಗಿದ್ದಲ್ಲಿ, ಅವರನ್ನೇ ಆಯ್ಕೆ ಮಾಡತಕ್ಕದ್ದು. ಅಂತಹ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ, ಸ್ಥಾನಪಲ್ಲಟ ಕೋರಿ ಬಂದಿರುವ ಅರ್ಜಿಗಳನ್ನು ಪರಿಗಣಿಸುವುದು. ಸ್ಥಾನಪಲ್ಲಟ ಕೋರಿ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ ಹೊಸದಾಗಿ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಗರಿಷ್ಠ 2 ತಿಂಗಳೊಳಗೆ ಮುಗಿಸತಕ್ಕದು.

11) ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಆಯ್ಕೆಯಾಗುವ ಸಂಭವವಿದ್ದಲ್ಲಿ, ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜೀನಾಮೆ ಅಂಗೀಕೃತ ಪತ್ರ ನೀಡಬೇಕಾಗಿರುವುದು ಕಡ್ಡಾಯ. ಅಂದರೆ ಯಾವುದಾದರೂ ಒಂದು ಸ್ಥಾನದಲ್ಲಿ ಮಾತ್ರ ಕೆಲಸ ನಿರ್ವಹಿಸಲು ಅವಕಾಶವಿದೆ.

## III) ಆಯ್ಕೆ ಆದ್ಯತೆ :

ಈ ಕೆಳಕಂಡಂತೆ ಆದ್ಯತೆ ಪಡೆಯಲು ಇಚ್ಛಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ ಮತ್ತು ಸ್ಥಳೀಯರಾಗಿರಬೇಕಾಗಿರುವುದು ಕಡ್ಡಾಯ.

### 1) ಆಸಿಡ್ ದಾಳಿಗೊಳಗಾದವರ ಆಯ್ಕೆ:-

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಸಲ್ಲಿಸಿದ್ದಲ್ಲಿ, ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

### 2) ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:-

ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ / ಮಾಜಿ ನಿವಾಸಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ ಕ್ರಮ ಸಂಖ್ಯೆ **III (1)** ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ಎರಡನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

### 3) ವಿಧವೆಯರ ಆಯ್ಕೆ:-

ಅ) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ III (1) ಮತ್ತು (2) ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ಮೂರನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸುವಂತಿಲ್ಲ.

ಆ) ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು

ಇ) ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ. ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

Scanned by CamScanner

ಈ) ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

4) <u>ಅಂಗವಿಕಲರ ಆಯ್ಕೆ:-</u>

ಇ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿಯ **III (1) (2)** ಮತ್ತು **(3)** ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ನಾಲ್ಕನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

ಈ) ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಉ) ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3–6 ವರ್ಷ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ನಿಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ. ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿ ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಕಿವುಡರು ಮತ್ತು ಮೂಕರು, ಕುರುಡರು, ಬುದ್ಧಿ ಮಾಂದ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ.

ಊ) ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ / ಸಿದ್ಧಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಛಗೊಳಿಸುವುದು. ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿಗೆ ಹೋದಾಗ ಅಂಗನವಾಡಿ ಕೇಂದ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದ್ದರಿಂದ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಋ) ಇತರೆ ದೈಹಿಕ ಅಂಗವೈಕಲ್ಯತೆ ಶೇ.60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ. ಅಂಗೀಕೃತ ಪ್ರಾಧಿಕಾರ(ಜಿಲ್ಲಾ ವೈದ್ಯಕೀಯ ಮಂಡಳಿ)ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು.

ಎ) ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

ಏ) ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

IV) <u>ಬೋನಸ್ ಅಂಕಗಳು:- (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)</u>

1) ಮಾಜಿ ದೇವದಾಸಿಯ ಮಗಳು,

2) ಯೋಜನಾ ನಿರಾಶ್ರಿತರು

3) ವಿಚ್ಛೇದಿತ ಮಹಿಳೆಯರು,

4) ಪರಿತ್ಯಕ್ತೆಯರು

Scanned by CamScanner

ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡುವುದು. ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5(5%) ಅಂಕ ನೀಡುವಂತಿಲ್ಲ. ಉದಾ: ಒಬ್ಬ ಅಭ್ಯರ್ಥಿಯು ನಿರಾಶ್ರಿತರು, ಪರಿತ್ಯಕ್ತೆ, ಮಾಜಿ ದೇವದಾಸಿ, ವಿಚ್ಛೇದಿತರು ಆಗಿದ್ದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ್ ಅಂಕಗಳನ್ನು ನೀಡುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು +5, ಯೋಜನಾ ನಿರಾಶ್ರಿತರು +5, ವಿಚ್ಛೇದಿತ ಮಹಿಳೆಯರು +5, ಪರಿತ್ಯಕ್ತೆಯರು +5, ಒಟ್ಟು 20 ಬೋನಸ್ ಅಂಕಗಳನ್ನು ನೀಡುವುದು. ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು ಕಡ್ಡಾಯ.

## V) ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:-

1) ಅರ್ಜಿ ನಿಗದಿತ ನಮೂನೆಯಲ್ಲಿ. (ಆನ್-ಲೈನ್)
2) ಜನನ ಪ್ರಮಾಣ ಪತ್ರ / ಜನ್ಮ ದಿನಾಂಕ ಇರುವ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ.
3) ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.
4) ತಹಶೀಲ್ದಾರರು/ ಉಪತಹಶೀಲ್ದಾರರಿಂದ ಪಡೆದ ಒಂದು(1)ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5) ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6) ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ).
7) ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
8) ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ).
9) ವಿಚ್ಛೇಧನ ಪ್ರಮಾಣ ಪತ್ರ ( ನ್ಯಾಯಾಲಯದಿಂದ ಪಡೆದಿರಬೇಕು)
10) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11) ಪರಿತ್ಯಕ್ತೆ ಬಗ್ಗೆ ಗ್ರಾಮಪಂಚಾಯ್ತಿಯಿಂದ ಪಡೆದ ಪ್ರಮಾಣ ಪತ್ರ.
12) ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13) ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

## VI) ಆಯ್ಕೆ ವಿಧಾನ:-

1) ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕದ ನಂತರ ಮುಂದಿನ 7 ಕೆಲಸದ ದಿನಗಳೊಳಗೆ ಸಮಿತಿ ಸಭೆ ಸೇರಬೇಕು.
2) ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಲು ಸಾಧ್ಯವಾಗದಂತಹ ಅನಿವಾರ್ಯ ಕಾರಣಗಳಿದ್ದಲ್ಲಿ ಕನಿಷ್ಠ 2/3 ರಷ್ಟು ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.
3) ಆನ್-ಲೈನ್ ನಲ್ಲಿ ಹಾಕಿದ್ದ ಎಲ್ಲಾ ಅರ್ಜಿಗಳನ್ನು ಅಂದೇ ಪರಿಶೀಲಿಸುವುದು.

Scanned by CamScanner

4) ಆನ್-ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದು.

5) ಸ್ವೀಕೃತವಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಪಡೆದ ಅಂಕ ಮತ್ತು ಬೋನಸ್ ಅಂಕಗಳನ್ನು ಒಳಗೊಂಡಂತೆ ಪಡೆದ ಒಟ್ಟು ಅಂಕಗಳಿಗನುಸಾರವಾಗಿ ಕ್ರೋಢೀಕೃತ ಪಟ್ಟಿಯನ್ನು ಆನ್-ಲೈನ್‌ನಲ್ಲಿ ಸಿದ್ಧಪಡಿಸಿ, ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂದೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

6) ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಒಂದು ವಾರ(7 ದಿನಗಳು) ಕಾಲಾವಕಾಶ ನೀಡುವುದು ಹಾಗೂ ಕಾಲಾವಕಾಶ ಮುಗಿದ ಮುಂದಿನ ಕೆಲಸದ ದಿನವೇ ಸಮಿತಿಯ ಸಭೆ ಕರೆದು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಕ್ರೋಢೀಕರಿಸಿ ಚರ್ಚಿಸಿ ಕಾರ್ಯಕರ್ತೆ / ಸಹಾಯಕಿಯರ ಅಂತಿಮ ಆಯ್ಕೆಪಟ್ಟಿಯನ್ನು ಅಂದೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

7) ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನೇಮಕಾತಿ ಪ್ರಾಧಿಕಾರವೇ ಚರ್ಚಿಸಿ ನಿಯಮಾನುಸಾರ ಕ್ರಮವಹಿಸುವುದು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

8) ಆಯ್ಕೆ ನಡವಳಿ ಪುಸ್ತಕದಲ್ಲಿ ಆಯ್ಕೆ ಸಮಿತಿಗೆ ಹಾಜರಾದ ಎಲ್ಲಾ ಸದಸ್ಯರ ಹಾಜರಾತಿ ಪಡೆಯುವುದು. ಆಯ್ಕೆ ಪ್ರಕ್ರಿಯೆ ಮುಗಿದ ನಂತರ ನಡವಳಿಗಳನ್ನು ಸವಿವರ(speaking order)ವಾಗಿ, ಕೇಂದ್ರವಾರು ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಯಾವ ಮಾನದಂಡಗಳನ್ವಯ ಆಯ್ಕೆ ಮಾಡಲಾಗಿದೆ ಎಂಬ ಷರಾದೊಂದಿಗೆ ನಡವಳಿಯಲ್ಲಿ ದಾಖಲಿಸಿ ಯಾವುದೇ ತಿದ್ದುಪಡಿಗಳಿದ್ದಲ್ಲಿ ಸಕಾರಣದೊಂದಿಗೆ ದೃಢೀಕರಿಸಿ ಹಾಜರಿರುವ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರ ಸಹಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

9) ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಾಗಿ ಕಾರ್ಯನಿರ್ವಹಿಸಲು ನೇಮಕಾತಿ ಆದೇಶಗಳನ್ನು ಹೊರಡಿಸಬೇಕು.

10) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಲ್ಲವೆಂದು ನೇಮಕಾತಿ ಆದೇಶದಲ್ಲಿ ತಿಳಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮೂಲ ದಾಖಲಾತಿಗಳು, ವೈದ್ಯಕೀಯ ಪ್ರಮಾಣ ಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್) ಗಳನ್ನು ಹಾಜರು ಪಡಿಸಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪರಿಶೀಲಿಸಿ ವರದಿ ಮಾಡಿಸಿಕೊಳ್ಳತಕ್ಕದ್ದು.

## VII) <u>ಅಂಗನವಾಡಿ ಸಹಾಯಕಿಯರನ್ನು ಕಾರ್ಯಕರ್ತೆಯರನ್ನಾಗಿ ಆಯ್ಕೆ ಮಾಡುವ ಬಗ್ಗೆ:</u>

1) ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಿರುವ / ಹೊಸಕೇಂದ್ರ ಪ್ರಾರಂಭಿಸುತ್ತಿರುವ ಗ್ರಾಮದಲ್ಲಿ ವಾಸಿಸುತ್ತಿರುವ ಸಹಾಯಕಿಯರಿದ್ದು, ಅವರು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದು, ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದ್ದು, 45 ವರ್ಷ ವಯೋಮಿತಿಯೊಳಗಿದ್ದು, ಆ ಅಂಗನವಾಡಿ ಕೇಂದದಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುತ್ತಿದ್ದು, ಕಾರ್ಯಕರ್ತೆ ಹುದ್ದಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆ ಹುದ್ದೆಗೆ ಬೇರೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಪ್ರಮೇಯವಿರುವುದಿಲ್ಲ. ಸದರಿ ಸಹಾಯಕಿಯನ್ನೇ ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡತಕ್ಕದ್ದು. ಈ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆದು ಆದೇಶ ಹೊರಡಿಸತಕ್ಕದ್ದು.

2) ಒಂದೇ ಗ್ರಾಮದಲ್ಲಿ ಇಬ್ಬರು ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ಸಹಾಯಕಿಯರಿದ್ದು ಅರ್ಜಿ ಸಲ್ಲಿಸಿದಲ್ಲಿ ಅವರ ಸೇವಾಹಿರಿತನವನ್ನು ಪರಿಗಣಿಸುವುದು. ಸೇವಾಹಿರಿತನವೂ ಒಂದೇ ಆಗಿದ್ದಲ್ಲಿ ವಯೋಹಿರಿಯರನ್ನು ಪರಿಗಣಿಸಬೇಕು.

Scanned by CamScanner

VIII) ಅನುಕಂಪದ ಆಧಾರದಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಗುರುತಿಸುವ ಬಗ್ಗೆ

1. ಸೇವೆಯಲ್ಲಿರುವಾಗಲೇ ಮರಣಹೊಂದುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅವಿವಾಹಿತ ಮಗಳನ್ನು ಅವರ ತಾಯಿಯು ನಿರ್ವಹಿಸುತ್ತಿದ್ದ ಹುದ್ದೆಗೆ ಅನುಕಂಪದ ಆಧಾರದಲ್ಲಿ ಇತರೆ ಕುಟುಂಬದ ಸದಸ್ಯರಿಂದ ನಿರಾಪೇಕ್ಷಣಾ ಪತ್ರವನ್ನು ನಿಗಧಿತ ಮೊತ್ತದ ಛಾಪಾಕಾಗದದ ಮೇಲೆ ಪಡೆದು ನೇಮಕ ಮಾಡತಕ್ಕದ್ದು.
2. ಅಭ್ಯರ್ಥಿಯು ನಿಗಧಿತ ವಿದ್ಯಾರ್ಹತೆ, ವಯೋಮಿತಿ ಮತ್ತು ಸ್ಥಳೀಯರಾಗಿಬೇಕಾಗಿರುವುದು ಕಡ್ಡಾಯ.

**IX) <u>ಶಿಸ್ತು ಪ್ರಾಧಿಕಾರ:-</u>**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಕಾರ್ಯನಿರ್ವಹಣೆಯಲ್ಲಿ ಯಾವುದೇ ನ್ಯೂನತೆಗಳ ಬಗ್ಗೆ ದೂರುಗಳು ಸ್ವೀಕೃತಗೊಂಡಲ್ಲಿ, ಅವುಗಳನ್ನು ಪರಿಶೀಲಿಸಿ ಇವರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವು ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಇರುತ್ತದೆ.

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-I,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

Scanned by CamScanner